

ಕೆ. ವೆಂಕಟಪ್ಪ

K. VENKATAPPA



ಕರ್ನಾಟಕ ಲಲಿತಕಲಾ ಅಕಾಡೆಮಿ – KARNATAKA LALITHAKALA ACADEMY



ಪಿ. ಆರ್. ತಿಪ್ಪೇಸ್ವಾಮಿ

ಕರ್ನಾಟಕದ ಕಲಾ ಜಗತ್ತಿನಲ್ಲಿ ಲೇಖಕ ಪಿ.ಆರ್. ತಿಪ್ಪೇಸ್ವಾಮಿ ಚಿರಪರಿಚಿತ ವ್ಯಕ್ತಿ. ಇವರ ಬಹುಮುಖ ವ್ಯಕ್ತಿತ್ವ ಕಲೆ ಜಾನಪದ ಪ್ರಾಕಾರಗಳು ಹಾಗೂ ಬರವಣಿಗೆಗೆ ಹರಡಿದೆ. ಇತ್ತೀಚೆಗೆ ನಿವೃತ್ತಿ ಹೊಂದಿದ ತಿಪ್ಪೇಸ್ವಾಮಿ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಜಾನಪದ ವಸ್ತು ಸಂಗ್ರಹಾಲಯದ ಪಾಲಕರಾಗಿದ್ದರು. ಅದರ ಅಸ್ತಿತ್ವ ಮತ್ತು ಬೆಳವಣಿಗೆ ಇವರ ಸಾರ್ಥಕ ಸಾಧನೆಗಳಲ್ಲೊಂದು.

ಚಿತ್ರದುರ್ಗ ಜಿಲ್ಲೆಯ ಹರ್ತಿಕೋಟೆ ಗ್ರಾಮದಲ್ಲಿ ಜನಿಸಿದ ತಿಪ್ಪೇಸ್ವಾಮಿ ಮೈಸೂರು ವಿಶ್ವವಿದ್ಯಾನಿಲಯದ ಪದವೀಧರರು. ಆದರೆ ಬ್ರಹ್ಮಚಾರಿಯಾಗಿ ಉಳಿದಿರುವ ಇವರ ಜೀವನ ಕಲೆಗೆ ಮುಡಿಪು. ಇವರ ಕಲಾ ಸೇವೆಯನ್ನು ಮನ್ನಿಸಿ, ರಾಜ್ಯದ ಲಲಿತಕಲಾ ಅಕಾಡೆಮಿ ತನ್ನ ಪ್ರಶಸ್ತಿಯನ್ನಿತ್ತು (೧೯೮೦) ಗೌರವಿಸಿದೆ. ಈ ಹಿಂದೆ ಇವರು ಲಲಿತಕಲೆ ಹಾಗೂ ಜಾನಪದ ಅಕಾಡೆಮಿಗಳೆರಡರ ಸದಸ್ಯರೂ ಆಗಿದ್ದು ಪ್ರಸ್ತುತ ರಾಜ್ಯ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರು ಹಾಗೂ ಕೇಂದ್ರ ಲಲಿತಕಲಾ ಅಕಾಡೆಮಿಯ ಸದಸ್ಯರೂ ಆಗಿದ್ದಾರೆ..

ತಿಪ್ಪೇಸ್ವಾಮಿ ನುರಿತ ಬರಹಗಾರರೂ ಹೌದು. ಕಲೆಯ, ಕಲಾವಿದರ ಬಗ್ಗೆ ಇವರ ಲೇಖನಗಳು ರಾಜ್ಯದ ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇವರ ವಿಮರ್ಶೆಯಿಂದ ಉತ್ತೇಜಿತರಾದ ಕಲಾವಿದರು ಹಲವರು. ಆದರಿಂದ ತಿಳುವಳಿಕೆ ಪಡೆದ ಕಲಾರಸಿಕರು ಅನೇಕ.

ಕರ್ನಾಟಕ ಕಲಾವಿದರು - 4

ಕೆ. ವೆಂಕಟಪ್ಪ

ಪಿ. ಆರ್. ತಿಪ್ಪೇಸ್ವಾಮಿ

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು -560 002

K. VENKATAPPA
A Biography By P.R. THIPPESWAMY Published by Karnataka Lalitakala Academy, 14/3, Canara Finance Corporation Builiding, Nrupathunga Road, Bangalore - 560 002.

First Impression : 1983
Second Impression : 1993

Copies : 1000

General Editor : S.N. Chandrasekhar
Design : N. Marishamachar

PRICE Rs. 10-00

Printed by :
MAYUR PRINT-ADS
Bangalore-560 053
Phone : 622175, 353536

ಮೊದಲ ಮಾತು (ಮೊದಲ ಮುದ್ರಣಕ್ಕೆ)

ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಮುಖ ಯೋಜನೆಗಳಲ್ಲಿ ರಾಜ್ಯದ ಹಿರಿಯ ಕಲಾವಿದರು ಮತ್ತು ಅವರ ಕೃತಿಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸುವುದು ಒಂದು. ಈ ಪುಸ್ತಕಗಳು ಆ ಹೆಸರಾಂತ ಕಲಾವಿದರ, ಅವರ ಕಲೆಯ ಪರಿಚಯ ಮಾಡಿಸುವುದರ ಜೊತೆಗೆ ರಾಜ್ಯದಲ್ಲಿ ಕಲೆಯು ಬೆಳೆದು ಬಂದ ದಾರಿ ಮತ್ತು ಅದರ ಚರಿತ್ರೆಯ ತಿಳಿವಳಿಕೆ ಉಂಟುಮಾಡಲು ಸಹಾಯಕವಾಗಲು ಸಾಕು.

ಈ ಯೋಜನೆಯ ಮೊದಲ ಕಂತಿಗೆ ಸರ್ವಶ್ರೀ ಕಲಾಗುರು ದಂಡಾವತಿಮಠ, ಡಾ. ಎಂ.ವಿ. ಮಿಣಜಿಗಿ, ಎಸ್. ಜಿ. ಪಾವಂಜೆ ಮತ್ತು ಕೆ. ವೆಂಕಟಪ್ಪನವರ ಹೆಸರುಗಳನ್ನು ಆರಿಸಲಾಗಿದೆ. ಇನ್ನೂ ಹಲವು ಹಿರಿಯ ಕಲಾವಿದರ ಬಗ್ಗೆ ಪುಸ್ತಕಗಳನ್ನು ಕ್ರಮೇಣವಾಗಿ ಪ್ರಕಟಿಸುವ ಕಾರ್ಯ ಕ್ರಮವು ಜಾರಿಯಲ್ಲಿದೆ.

ಈ ಪುಸ್ತಕಗಳನ್ನು ರಚಿಸಲು ಆರಿಸಿರುವ ಬರಹಗಾರರೂ ಕಲೆಯ ವಿಷಯ ಮತ್ತು ಆಯಾ ಕಲಾವಿದರ ಜೀವನದ ಬಗ್ಗೆ ಅರಿತವರು. ಇವುಗಳಿಗೆ ಆರಿಸಿರುವ ಚಿತ್ರಗಳೂ, ಆಯಾ ಕಲಾವಿದರ, ಅವರ ಕಲಾವಿಲಾಸದ ಪ್ರತೀಕ. ಅವು ಆಯಾ ಕಲಾವಿದರ ಕಲಾ ಸಂಪತ್ತಿನ ವ್ಯಾಪ್ತಿಯನ್ನು ಅರಿಯಲು ಸಾಧಕವಾಗುವುದರಲ್ಲಿ ಸಂದೇಹವಿಲ್ಲ.

ಈ ಮಾಲೆಯನ್ನು ತಯಾರಿಸುವಲ್ಲಿ ಸಂಪಾದಕತ್ವ ವಹಿಸಿರುವ ಶ್ರೀ ಎಸ್.ಎನ್. ಚಂದ್ರಶೇಖರ್ ಮತ್ತು ಅವರ ಸಮಿತಿಯ ಸದಸ್ಯರಾದ ಸರ್ವಶ್ರೀ ಆರ್. ಎಂ. ಹಡಪದ್, ಪಿ.ಆರ್. ತಿಪ್ಪೇಸ್ವಾಮಿ ಮತ್ತು

ಎಂ.ಇ. ಗುರು ಅವರಿಗೂ ಮತ್ತು ಗ್ರಂಥಕರ್ತರಿಗೂ ಅಕಾಡೆಮಿಯ ಪರವಾಗಿ ನನ್ನ ಹೃತ್ಪೂರ್ವಕ ವಂದನೆಗಳು.

ಕಲಾವಿದರು, ಕಲಾರಸಿಕರು ಮತ್ತು ಸಾಹಿತ್ಯಾಭಿಮಾನಿಗಳು ಅಕಾಡೆಮಿಯ ಈ ಸಾಧನೆಯನ್ನು ಸ್ವಾಗತಿಸುವರೆಂದು ಆಶಿಸುತ್ತೇನೆ.

ಟಿ. ಪಿ. ಅಕ್ಕಿ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ

ಎರಡನೆಯ ಆವೃತ್ತಿಯ ಮುನ್ನುಡಿ


ನಮ್ಮ ಲಲಿತಕಲಾ ಅಕಾಡೆಮಿಯ 'ಕಲಾವಿದರ ಮಾಲೆ' ಜನಪ್ರಿಯವಾಗುತ್ತಿರುವುದು ಸಂತೋಷದಾಯಕ. ಅಕಾಡೆಮಿಯ ಇತರ ಪ್ರಕಟಣೆಗಳಂತೆ ಈ ಮಾಲೆಯ ಹೊತ್ತಿಗೆಗಳಿಗೂ ಸ್ವಲ್ಪ ನಿಧಾನವಾಗಿಯಾದರೂ, ಅವುಗಳ ಬೇಡಿಕೆ ಬೆಳೆದು, ಈಗ ಅವುಗಳ ಪುನರ್ ಮುದ್ರಣದತ್ತ ಸಾಗುತ್ತಿರುವುದು, ಅವುಗಳ ಅವಶ್ಯಕತೆ, ಸಾರ್ಥಕತೆಗಳ ದ್ಯೋತಕ.

ಹಾಗೆ ಪುನರ್‌ಮುದ್ರಣಕ್ಕೆ ತೊಡಗುವಾಗ, ಹಿಂದೆ ಕಂಡಿರಬಹುದಾದ ಕೆಲವು ದೋಷಗಳನ್ನು ನಿವಾರಿಸುವ ಕೆಲಸವನ್ನೂ ಕೈಗೊಳ್ಳಲಾಗಿದೆ ಎಂಬ ಭರವಸೆಯನ್ನು ಈ ಮೂಲಕ ಓದುಗರಿಗೆ ಕೊಡುತ್ತೇವೆ.

ಈ ದಿಸೆಯಲ್ಲಿ ಈಗ ಪುನರ್‌ಮುದ್ರಣಗೊಳ್ಳುತ್ತಿರುವ ಕೆ. ವೆಂಕಟಪ್ಪ ರವರ ಕೃತಿಯನ್ನು ಕಲಾವಿದರು, ಸಾಹಿತ್ಯಪ್ರಿಯರ ಮತ್ತು ಇತರ ಓದುಗರ ಅವಗಾಹನೆಗೆ ತರಲು ಅಕಾಡೆಮಿಯ ಈ ಸಾಧನೆಗೆ ಪ್ರೋತ್ಸಾಹ ದೊರಕುವುದೆಂದು ಆಶಿಸೋಣ.

ಪಿ.ಆರ್. ತಿಪ್ಪೇಸ್ವಾಮಿ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು

ಬೆಂಗಳೂರು
1993



ಕೆ. ವೆಂಕಟಪ್ಪ

" My knowledge of fine arts is a drop in the ocean " ಇದು ಕಲಾತಪಸ್ವಿ, ಕಲಾಯೋಗಿ ಎಂದೆಲ್ಲಾ ಪ್ರಸಿದ್ಧರಾದ ಶ್ರೀ ಕೆ. ವೆಂಕಟಪ್ಪನವರು ಮತ್ತೆ ಮತ್ತೆ ತಮ್ಮ ಕಲಾ ಸಾಧನೆಯನ್ನು ಕುರಿತು ಆಡುತ್ತಿದ್ದ ಸೌಜನ್ಯದ ಮಾತು. ಈ ನುಡಿಗಳನ್ನು ಮೆಲಕು ಹಾಕುವಾಗ "ವಿದ್ಯಾ ದದಾತಿ ವಿನಯಂ" ಎಂಬ ಸುಭಾಷಿತ ನೆನಪಿಗೆ ಬರುತ್ತದೆ.

ಇದಕ್ಕೆ ಪೂರಕವಾದ ಮತ್ತೊಂದು ಸಂದರ್ಭ ವೆಂಕಟಪ್ಪನವರ ಬಗೆಗೆ ನಮ್ಮಲ್ಲಿ ಅತಿಶಯವಾದ ಗೌರವ ಭಾವನೆ ಮೂಡಿಸುತ್ತದೆ. ಸುಮಾರು ೪೫ ವರ್ಷಗಳ ಹಿಂದೆ ಬೆಂಗಳೂರಿನ ಪುಸ್ತಕ ವ್ಯಾಪಾರಿಯೊಬ್ಬರಿಗೆ ವಿದೇಶದಿಂದ ತರಿಸಿದ "Persian Painting"

ಎಂಬ ದುಬಾರಿ ಬೆಲೆಯ ಪುಸ್ತಕದ ಮಾರಾಟ ಸಮಸ್ಯೆಯಾಗಿ ಪರಿಣಮಿಸಿತು. ಆ ಸಂದರ್ಭದಲ್ಲಿ ಯಾರೋ ಒಬ್ಬರು ಆ ಪುಸ್ತಕವನ್ನು ಕೊಳ್ಳಲು ಅರ್ಹರಾದ ವ್ಯಕ್ತಿ ಮೈಸೂರಿನ ಕಲಾವಿದ ಕೆ. ವೆಂಕಟಪ್ಪನವರು ಮಾತ್ರ ಎಂದು ಸೂಚಿಸಿದರು. ಪುಸ್ತಕ ವ್ಯಾಪಾರಿಗಳು ಸರಿಯಾದ ವಿಳಾಸ ಗೊತ್ತಿಲ್ಲದೆ ಶ್ರೀ ಕೆ. ವೆಂಕಟಪ್ಪ, ಆರ್ಟಿಸ್ಟ್, ಪ್ಯಾಲೆಸ್ ಬಿಲ್ಡಿಂಗ್ಸ್, ಮೈಸೂರು, ಎಂದು ಬರೆದರು. ಮರುಟಪಾಲಿಗೆ "ಪುಸ್ತಕವನ್ನು ವಿ.ಪಿ. ಮೂಲಕ ಕಳಿಸಿಕೊಡಿ" ಎಂದು ಅವರಿಂದ ಉತ್ತರ ಬಂತು. ಆದರೆ ಆ ಪತ್ರ ಒಂದು ಎಚ್ಚರಿಕೆಯ ಮಾತನ್ನೂ ಹೊತ್ತು ತಂದಿತ್ತು. "ನಾನು ಆರ್ಟಿಸ್ಟ್ ಅಲ್ಲ, ಆರ್ಟ್ ಸ್ಟೂಡೆಂಟ್, ವಿಳಾಸ ಬರೆಯುವಾಗ 'ಆರ್ಟ್ ಸ್ಟೂಡೆಂಟ್'. ಎಂದೇ ಬರೆಯಿರಿ" ಎಂದು ಸೂಚಿಸಿದ್ದರು.

ಕೆ. ವೆಂಕಟಪ್ಪನವರ ಬಗೆಗೆ ಜನಜನಿತವಾದ ಈ ಮಾತುಗಳಿಂದ ಅವರು ಬದುಕಿನುದ್ದಕ್ಕೂ ತಮ್ಮನ್ನು "ಕಲೋಪಾಸಕ" ನೆಂದು ಕರೆದುಕೊಂಡರೇ ಹೊರತು, "ಕಲಾತಪಸ್ವಿ" ಯೆಂದು ಕರೆದುಕೊಳ್ಳಲಿಲ್ಲ. ಕಲಾಪ್ರಪಂಚದಲ್ಲಿ ತಾವು ಸಾಧಿಸಿದ ಔನ್ನತ್ಯಕ್ಕೆ ಒಪ್ಪುವಂಥ ವಿನಯ, ಸೌಜನ್ಯ ಅವರಲ್ಲಿ ಮನೆ ಮಾಡಿತ್ತು. ಬರಿಯ ಪ್ರಚಾರದ ಬೆನ್ನು ಬಿದ್ದಿರುವ ಇಂದಿನ ಕಲಾವಿದರನೇಕರಿಗೆ ಈ ಸೌಜನ್ಯ ಆದರ್ಶವಾಗಿದೆ.

ಅಂತರಾಷ್ಟ್ರೀಯ ಖ್ಯಾತಿ ಪಡೆದ, ರಾಷ್ಟ್ರಮಟ್ಟದ ಕಲಾವಿದರಲ್ಲಿ ಒಬ್ಬರಾದ ಶ್ರೀ ವೆಂಕಟಪ್ಪನವರು ಭಾರತದ ಕಲಾಸಂಪತ್ತಿಗೆ ಕರ್ನಾಟಕ ಅರ್ಪಿಸಿದ ಹೆಮ್ಮೆಯ ಕಾಣಿಕೆ.

ಕರ್ನಾಟಕದ ಕಲಾ ಪ್ರಪಂಚದಲ್ಲಿ ಜ್ವಾಜ್ವಲ್ಯಮಾನರಾಗಿ ಬೆಳಗಿದ ಅಪೂರ್ವ ವ್ಯಕ್ತಿ ದಿವಂಗತ ಕೆ. ವೆಂಕಟಪ್ಪನವರು ಜನಿಸಿದ್ದು

೧೮೮೮ರಲ್ಲಿ. ಮೈಸೂರಿನ ಚಿತ್ರಕಾರರ ವಂಶದಲ್ಲಿ ಇವರ ಜನನ. ಇವರು ಅನೇಕ ಕ್ಷೇತ್ರಗಳಲ್ಲಿ ಕೈಯಾಡಿಸಿದವರು. ಅಲ್ಲದೆ ಪ್ರತಿಯೊಂದು ಕ್ಷೇತ್ರದಲ್ಲೂ ಅನೇಕ ಅಪೂರ್ವವಾದ ಕಲಾಕೃತಿಗಳನ್ನು ರಚಿಸಿದವರು. ಶಿಲ್ಪ, ವರ್ಣಚಿತ್ರ, ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ರಿಲೀಫ್ ಕೆಲಸ, ತಾಮ್ರದ ತಗಡಿನ ಮೇಲೆ ರಿಲೀಫ್ ಕೆಲಸ, ವೀಣೆಗಳ ರಚನೆ ಹಾಗೂ ವೀಣಾವಾದನ ಇವುಗಳೆಲ್ಲದರಲ್ಲಿ ಸಿದ್ಧಹಸ್ತರಾಗಿದ್ದರು. ಈ ಯಾವುದೇ ಒಂದು ಕ್ಷೇತ್ರದಲ್ಲಿ ಅವರಷ್ಟು ಪ್ರಾವೀಣ್ಯ ಪಡೆದವರು ದೊಡ್ಡ ಕಲಾಕಾರನೆಂದು ಮೆರೆಯಬಹುದಿತ್ತು. ಆದರೆ ವೆಂಕಟಪ್ಪನವರು ಎಲೆಯ ಮರೆಯ ಹೂವಿನಂತಿದ್ದು ತಮ್ಮ ಬಹುಮುಖ ಕಲಾಸೇವೆಯಲ್ಲೇ ಸದಾ ತಲ್ಲೀನರಾಗಿರುತ್ತಿದ್ದರು. ಅಗ್ಗದ ಪ್ರಚಾರಕ್ಕಾಗಲಿ, ಪ್ರಶಂಸೆಗಾಗಲಿ ಜಗ್ಗದ ನಿಷ್ಠಾವಂತ ನಿಷ್ಕಾಮಕರ್ಮಿಯಾಗಿದ್ದು ಬದುಕಿನ ಕೊನೆಯವರೆಗೂ ಕಲೆಗಾಗಿ ದುಡಿದ ಅಪೂರ್ವ ವ್ಯಕ್ತಿ ವೆಂಕಟಪ್ಪ.

ವೆಂಕಟಪ್ಪನವರಿಗೆ ಕಲೆ ರಕ್ತಗತವಾಗಿ ಬಂದುದೆಂದೇ ಹೇಳಬೇಕು. ಅವರು ಕಲಾವಿದರ ವಂಶದಲ್ಲಿ ಹುಟ್ಟಿಬಂದವರು. ಅವರ ಅಜ್ಜ ಪ್ರಸಿದ್ಧ ಚಿತ್ರಕಾರರಾಗಿದ್ದ ಚಿತ್ರದುರ್ಗದ ವೆಂಕಟಪ್ಪ ಎಂಬುವರು. ಅವರ ತಂದೆ ಕೃಷ್ಣಪ್ಪ, ಅರಮನೆಯ ಕಲಾವಿದರು. ವೆಂಕಟಪ್ಪನವರ ಪೂರ್ವಜರು ಅರಸರ ಕಾಲದಲ್ಲಿ ಮೈಸೂರಿಗೆ ಬಂದು ನೆಲೆಸಿದರು. ವೆಂಕಟಪ್ಪನವರಾದರೊ ತಮ್ಮ ಬಾಲ್ಯ ಹಾಗೂ ಯೌವ್ವನವನ್ನು ವಿಶೇಷವಾಗಿ ಮೈಸೂರಿನಲ್ಲೇ ಕಳೆದರು. ಚಾಮರಾಜೇಂದ್ರ ಕಲಾಶಾಲೆಯಲ್ಲಿದ್ದ ಶ್ರೀ ಕೆ. ರಾಮಕೃಷ್ಣ ಅವರ ನೇತೃತ್ವದಲ್ಲಿ ಕಲಾಭ್ಯಾಸವನ್ನು ನಡೆಸಿ, ತಮ್ಮ ಮುಂದಿನ ಕಲಾ ಸಾಧನೆಗೆ ಅತ್ಯುತ್ತಮ ಬುನಾದಿಯನ್ನು ಹಾಕಿಕೊಂಡರು. ಮೈಸೂರಿನ ಹೊಸ

ಅರಮನೆಯನ್ನು ಕಟ್ಟುವ ಕಾಲದಲ್ಲಿ ದೇಶದ ನಾನಾ ಮೂಲೆಗಳಿಂದ ಆರಿಸಿದ ಅನೇಕ ಕಲಾವಿದರು ಕೆಲಸ ಮಾಡುತ್ತಿದ್ದರು. ಬಾಲಕ ವೆಂಕಟಪ್ಪನಿಗೂ ಅಲ್ಲಿ ಕೆಲಸ ಮಾಡುವ ಅವಕಾಶ ದೊರಕಿತ್ತು. ನುರಿತ ಕಲಾವಿದನಂತೆ ಕೈ ಚಳಕ ತೋರುತ್ತಿದ್ದ ಬಾಲಕ 'ಸಿಂಹಸಿಂಹಿಣಿ' ಎಂಬ ತನ್ನ ಕಲಾ ಕೃತಿಯಿಂದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಕೃಪೆಗೆ ಪಾತ್ರನಾದ. ಈ ಕೃತಿಯನ್ನು ವೆಂಕಟಪ್ಪ ರಚಿಸಿದುದು ಎಂದು ಹೇಳಿದಾಗ ಮಹಾರಾಜರು ಒಬ್ಬ ಬಾಲಕ ಇಂಥಾ ಕೃತಿ ರಚಿಸಲು ಸಾಧ್ಯವೆ? ಎಂದು ಅನುಮಾನ ವ್ಯಕ್ತ ಪಡಿಸಿದರು. ಆಗ ಸಣ್ಣ ಪರೀಕ್ಷೆಯೊಂದರ ಮೂಲಕ ಬಾಲಕ ವೆಂಕಟಪ್ಪನ ಕಲಾಕೌಶಲವನ್ನು ಕಂಡು ಮೆಚ್ಚಿ ಬಾಲಕನಿಗೆ ೧೦೦ ರೂಪಾಯಿಗಳ ಬಹುಮಾನವನ್ನು ನೀಡಿ ಪ್ರೋತ್ಸಾಹಿಸಿದರು.

ಹೀಗೆ ರಾಜರ ಕೃಪೆಗೆ ಪಾತ್ರನಾದ ಈ ಬಾಲ ಕಲಾವಿದನಿಗೆ ಮುಂದೆ ಹೆಚ್ಚಿನ ಕಲಾಭ್ಯಾಸಕ್ಕೆ ಅವಕಾಶಗಳೂ ಒದಗಿ ಬಂದುದು ಆಶ್ಚರ್ಯವೇನಲ್ಲ. ಆಗ್ಗೆ ದಕ್ಷಿಣ ಭಾರತದಲ್ಲಿ ಕಲಾ ಶಿಕ್ಷಣವನ್ನು ಒದಗಿಸುತ್ತಿದ್ದ ಮದರಾಸಿನ ಕಲಾಶಾಲೆಗೆ ಕಳುಹಿಸಲು ಅರಮನೆಯವರೇ ಎಲ್ಲಾ ವ್ಯವಸ್ಥೆಯನ್ನೂ ಮಾಡಿದರು. ಅಲ್ಲಿನ ಎಲ್ಲಾ ಪರೀಕ್ಷೆಗಳಲ್ಲೂ ಮೊದಲ ದರ್ಜೆಯಲ್ಲೇ ತೇರ್ಗಡೆಯಾದುದನ್ನು ತಿಳಿದು ಮಹಾರಾಜರಿಗೆ ಅಮಿತಾನಂದವಾಯಿತು. ಕಲಾಶಿಕ್ಷಣದಲ್ಲಿ ತೇರ್ಗಡೆಯಾದ ವೆಂಕಟಪ್ಪನವರು ಮಹಾರಾಜರನ್ನು ಕಂಡು ಶಿಕ್ಷಣಕ್ಕೆ ನೀಡಿದ ನೆರವಿಗಾಗಿ ಕೃತಜ್ಞತೆ ಅರ್ಪಿಸಿದರು. ಹುಡುಗನ ನಮ್ರತೆಯನ್ನು ಕಂಡ ಅರಸರು "ಮುಂದೇನು ಮಾಡುವೆ ?" ಎಂದು ಕೇಳಿದರು. ಆಗ ವೆಂಕಟಪ್ಪನವರು ಭಯಮಿಶ್ರಿತವಾದ ಸಂಕೋಚದಿಂದ ಕಲ್ಕತ್ತೆಯ ಖ್ಯಾತ ಕಲಾವಿದರಾದ ಅವನೀಂದ್ರನಾಥ ಠಾಗೂರರ

ಸನ್ನಿಧಿಯಲ್ಲಿ ಕಲಾಭ್ಯಾಸ ಮಾಡಬೇಕೆಂಬ ತಮ್ಮ ಮಹದಾಕಾಂಕ್ಷೆಯನ್ನು ವ್ಯಕ್ತಪಡಿಸಿದರು. ಕಲಾಪ್ರೇಮಿಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಬಾಲಕನ ಆಸಕ್ತಿಯನ್ನು ಕಂಡು ಹಿಗ್ಗಿ, ಕಲ್ಕತ್ತೆಗೆ ಹೋಗಲು ಅನುಕೂಲವಾಗುವಂತೆ ಪ್ರತ್ಯೇಕ ಶಿಕ್ಷಕನೊಬ್ಬನನ್ನು ನೇಮಿಸಿ ಇಂಗ್ಲೀಷ್ ಭಾಷೆಯನ್ನು ಕಲಿಯಲು ವ್ಯವಸ್ಥೆ ಮಾಡಿದರು.

ಅರಸರ ಪ್ರೋತ್ಸಾಹ

ವೆಂಕಟಪ್ಪನವರು ಈ ಮೊದಲೇ ಮದರಾಸಿನಲ್ಲಿ ಪಾಶ್ಚಾತ್ಯ ಕಲಾ ಸಂಪ್ರದಾಯದ ಪರಿಚಯ ಪಡೆದಿದ್ದರು. ಅರಸರ ಪ್ರೋತ್ಸಾಹದಿಂದ ೧೯೦೮ ರಲ್ಲಿ ಸರಕಾರದ ವಿದ್ಯಾರ್ಥಿ ವೇತನ ಪಡೆದು ಕಲ್ಕತ್ತಾ ಕಲಾಶಾಲೆಯಲ್ಲಿ ಉನ್ನತ ಶಿಕ್ಷಣ ಪಡೆಯಲು ಹೋದರು. ಅಲ್ಲಿ ಪರ್ಸಿ ಬ್ರೌನ್ ಎಂಬ ವಿದೇಶಿ ಕಲಾ ಶಿಕ್ಷಕ ಹಾಗೂ ಅವನೀಂದ್ರನಾಥ ಠಾಗೂರ್ ಅವರ ಮಾರ್ಗ ದರ್ಶನದಲ್ಲಿ ಅವರ ಕಲಾಭ್ಯಾಸ ಮುಂದುವರಿಯಿತು. ಎರಡು ವರ್ಷಗಳಲ್ಲಿ ಹಿಂದಿರುಗಬೇಕಾಗಿದ್ದ ವೆಂಕಟಪ್ಪನವರು ಏಳೂವರೆ ವರ್ಷಗಳ ಕಾಲ ಅಲ್ಲಿ ಸತತವಾಗಿ ಅಭ್ಯಾಸದಲ್ಲಿ ತಲ್ಲೀನರಾದರು. ಕೇವಲ ಚಿತ್ರಕಲಾಭ್ಯಾಸಕ್ಕೆಂದು ಹೋದವರು ವಿವಿಧ ಕಲಾ ಪ್ರಕಾರಗಳಾದ ರೇಖಾಚಿತ್ರ, ವರ್ಣಚಿತ್ರ, ಶಿಲ್ಪ, ಸಂಗೀತಗಳ ಶಿಕ್ಷಣಕ್ಕೆ ಅನುಕೂಲವಿದ್ದುದರಿಂದ, ಈ ಎಲ್ಲಾ ವಿಭಾಗಗಳಲ್ಲೂ ಪರಿಣತಿಯನ್ನು ಪಡೆದುಕೊಂಡರು. ಅಲ್ಲಿದ್ದಾಗ ದೇಶದ ನಾನಾ ಚಿತ್ರಕಲಾ ಸಂಗ್ರಹಾಲಯಗಳನ್ನೂ ಸಂದರ್ಶಿಸಿದರು. ಗುರುಗಳಾದ ಅವನೀಂದ್ರನಾಥ ಠಾಗೂರರಿಗೆ ತುಂಬ ಅಚ್ಚುಮೆಚ್ಚಿನ ಶಿಷ್ಯರಾಗಿದ್ದುಕೊಂಡು ಕಲಾಭ್ಯಾಸದಲ್ಲಿ ಪರಿಣತಿಯನ್ನು ಪಡೆದು ತಾಯ್ನಾಡಿಗೆ ಹಿಂದಿರುಗಿದರು.

ಕಲ್ಕತ್ತೆಯಲ್ಲಿದ್ದಾಗ ಜರುಗಿದ ಒಂದು ಘಟನೆಯಿಂದ ವಿದ್ಯಾರ್ಥಿ ದೆಸೆಯಲ್ಲೇ ವೆಂಕಟಪ್ಪನವರು ಎಂತಹ ಕಲಾ ಪರಿಣತಿ ಸಾಧಿಸಿಕೊಂಡಿದ್ದರೆಂಬುದನ್ನು ನಾವು ಅರಿಯಬಹುದು. ೧೯೧೧ ರಲ್ಲಿ ಲಂಡನ್ನಿನಿಂದ ಮಿಸೆಸ್ ಹೆರಿಂಗ್‌ಹ್ಯಾಂ ಎಂಬಾಕೆ ವಿಶ್ವವಿಖ್ಯಾತವಾದ ಅಜಂತಾ ಗುಹೆಗಳ ಭಿತ್ತಿಚಿತ್ರಗಳನ್ನು ಪ್ರತಿಕೃತಿ ಮಾಡಿಸುವ ಉದ್ದೇಶದಿಂದ ಭಾರತಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ಭಿತ್ತಿಚಿತ್ರಗಳನ್ನು ಪ್ರತಿಕೃತಿ ಮಾಡುವ ಸಲುವಾಗಿ ಉತ್ತಮ ಕಲಾವಿದರನ್ನು ಕಳಿಸಿಕೊಡಲು ಪರ್ಶಿ ಬ್ರೌನ್ ಮತ್ತು ಅವನೀಂದ್ರನಾಥ ಠಾಗೂರರನ್ನು ಕೇಳಿದಳು. ಆಗ ಅವರು ತಮ್ಮ ನೆಚ್ಚಿನ ಶಿಷ್ಯರಲ್ಲಿ ಸಮರ್ಥರಾದ ನಂದಲಾಲ ಬಸು ಹಾಗೂ ವೆಂಕಟಪ್ಪನವರುಗಳನ್ನು ಕಳಿಸಿಕೊಟ್ಟರು. ಅಲ್ಲಿ ವೆಂಕಟಪ್ಪನವರು ತಯಾರಿಸಿದ ಪ್ರತಿಕೃತಿಗಳು ಮೂಲದ ವಿವರವನ್ನು ಸೆರೆಹಿಡಿಯುವಲ್ಲಿ, ವರ್ಣವಿನ್ಯಾಸದಲ್ಲಿ ಹಾಗೂ ರಸ ಪ್ರತಿಪಾದನೆಯಲ್ಲಿ ಅತ್ಯುತ್ತಮವಾಗಿದ್ದು ಎಲ್ಲರ ಮೆಚ್ಚಿಗೆಗೆ ಪಾತ್ರವಾದುವು. ಇದರಿಂದ ವೆಂಕಟಪ್ಪನವರ ಹೆಸರನ್ನು ರಾಷ್ಟ್ರಮಟ್ಟದಲ್ಲಿ ಕೇಳಿಬರುವಂತಾಯಿತು. ಹೀಗೆ ಕಲಾಪರಿಣತಿಯನ್ನು ಸಾಧಿಸಿಕೊಂಡು ಮೈಸೂರಿಗೆ ಹಿಂದಿರುಗಿದ ವೆಂಕಟಪ್ಪನವರನ್ನು ಉನ್ನತ ಶಿಕ್ಷಣ ಪಡೆಯಲು ಲಂಡನ್ನಿನ ರಾಯಲ್ ಕಾಲೇಜ್ ಆಫ್ ಆರ್ಟ್ಸ್‌ಗೆ ಕಳುಹಿಸಿಕೊಡುವಂತೆ ಪರ್ಸಿ ಬ್ರೌನ್ ಸೂಚಿಸಿದರು. ವೆಂಕಟಪ್ಪನವರ ಕಲಾ ನಿಷ್ಠೆಯನ್ನು ಮೆಚ್ಚಿ ಅರಸರು ಆ ಸಲಹೆಯಂತೆ ಅವರನ್ನು ಲಂಡನ್ನಿಗೆ ಕಲಿಸಿಕೊಡಲೂ ಒಪ್ಪಿದ್ದರು. ಆದರೆ ಆ ವೇಳೆಗೆ ಮೊದಲನೆಯ ಮಹಾ ಯುದ್ಧ ಆರಂಭವಾದುದರಿಂದ ದೇಶದಿಂದ ಹೊರಗೆ ಹೋಗಲು ಸಾಧ್ಯವಿಲ್ಲದ ಆ ಅಪೂರ್ವ ಅವಕಾಶದಿಂದ ಅವರು ವಂಚಿತರಾದರು. ಬಳಿಕ ಮೈಸೂರಿನಲ್ಲೇ ನೆಲಸಿ, ರಾಜಾಶ್ರಯ ಪಡೆದು ತಮ್ಮ ಕಲಾಸಾಧನೆಯಲ್ಲಿ ನಿರತರಾದರು.

ಅರಸರ ಅಪೇಕ್ಷೆಯಂತೆ ವೆಂಕಟಪ್ಪನವರು ಅರಮನೆಯಲ್ಲೇ ಶಿಲ್ಪ ಕೃತಿಗಳ ರಚನೆಗೆ ತೊಡಗಿದರು. ಮದರಾಸು ಹಾಗೂ ಕಲ್ಕತ್ತೆಯಲ್ಲಿ ಅಭ್ಯಾಸ ಮುಗಿಸಿಕೊಂಡು ಬರುವ ವೇಳೆಗೆ ವೆಂಕಟಪ್ಪನವರಿಗೆ ೩೦ ವರ್ಷ ಮೀರಿತ್ತು. ಕಲಾದೇವಿಯ ಆರಾಧನೆಯಲ್ಲಿ ಮೈ ಮರೆತ ಕಲಾವಿದನಿಗೆ ಜೀವನ ಸಂಗಾತಿಯ ಅವಶ್ಯಕತೆ ಕಂಡುಬರಲಿಲ್ಲ. ಸಂಸಾರದ ಬಂಧನ ಕಲೆಯ ತಪಸ್ಸಿಗೆ ಅಡ್ಡಿಯಾಗುತ್ತದೆಂದು ನಿರ್ಧರಿಸಿದ ಅವರು ಜೀವನದುದ್ದಕ್ಕೂ ಬ್ರಹ್ಮಚಾರಿಯಾಗಿಯೇ ಉಳಿಯಲು ತೀರ್ಮಾನಿಸಿ, ಪರಿಶುದ್ಧವಾದ ಸಾರ್ಥಕ ಬದುಕನ್ನು ನಡೆಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರು ವೆಂಕಟಪ್ಪನವರೊಡನೆ ತುಂಬ ಆತ್ಮೀಯವಾಗಿ ನಡೆದುಕೊಳ್ಳುತ್ತಿದ್ದರು. ವೆಂಕಟಪ್ಪನವರಲ್ಲಿ ಹುದುಗಿದ್ದ ಅಸಾಧಾರಣ ಪ್ರತಿಭೆಯನ್ನು ಗುರುತಿಸಿದ ಅರಸರು, ಅವರಿಗೆ ಅರಮನೆಯಲ್ಲೇ ಉದ್ಯೋಗವನ್ನು ಒದಗಿಸಿದರು. ಅಲ್ಲದೆ ವೆಂಕಟಪ್ಪನವರು ಬಯಸಿದಾಗ ಯಾವ ಕಟ್ಟುಪಾಡೂ ಇಲ್ಲದೆ ಸಾಧಾರಣ ಉಡುಪಿನಲ್ಲೇ ಮಹಾರಾಜರನ್ನು ಸಂದರ್ಶಿಸುವ ವಿಶೇಷ ಪರವಾನಗಿಯಿತ್ತು.

ಅಚ್ಚುಕಟ್ಟು

ವೆಂಕಟಪ್ಪನವರು ಶಿಸ್ತಿಗೆ ಹಾಗು ಅಚ್ಚುಕಟ್ಟುತನಕ್ಕೆ ಹೆಸರಾದವರು. ಅವರು ಮಾಡುವ ಪ್ರತಿಯೊಂದೂ ಕೆಲಸದಲ್ಲೂ ಅಚ್ಚುಕಟ್ಟುತನವನ್ನು ಕಾಣಬಹುದಾಗಿತ್ತು. ಉಡುಪು ಧರಿಸುವಂಥ ಸಾಮಾನ್ಯ ವಿಷಯದಲ್ಲಾಗಲಿ, ಶ್ರೇಷ್ಠ ಕಲಾಕೃತಿಗಳ ರಚನೆಯಲ್ಲೇ ಆಗಲಿ, ಈ ಅಚ್ಚುಕಟ್ಟುತನ, ನೀಟುಗಾರಿಕೆ ಎದ್ದು ಕಾಣುತ್ತಿದ್ದುವು.

ಅವರದು ಯಾರ ದಾಕ್ಷಿಣ್ಯಕ್ಕೂ ಒಳಗಾಗದ ಖಂಡಿತ ಸ್ವಭಾವ. ಸತ್ಯಪಕ್ಷಪಾತಿಗಳಾದ ಅವರು ಯಾರಿಗೂ ಅಂಜದೆ, ಎಂತಹ ಸಂದರ್ಭದಲ್ಲೂ ದಿಟ್ಟತನದಿಂದ ಬದುಕು ನಡೆಸಿದರು. ಅಧಿಕಾರದ ದರ್ಪಕ್ಕಾಗಲಿ, ಬಲತ್ಕಾರಕ್ಕಾಗಲಿ ತಲೆಬಾಗುವಂತಹ ವ್ಯಕ್ತಿತ್ವ ಅವರದ್ದಲ್ಲ. ಇದನ್ನು ಅರಿತಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವೆಂಕಟಪ್ಪನವರ ಮನಸ್ಸಿಗೆ ನೋವಾಗದಂತೆ, ವ್ಯಕ್ತಿಗೌರವಕ್ಕೆ ಚ್ಯುತಿಬಾರದ ರೀತಿಯಲ್ಲಿ ಅರಮನೆಯಲ್ಲಿ ಅವರು ಕಲಾವ್ಯವಸ್ಥೆಯನ್ನು ಸಾಗಿಸಿಕೊಂಡು ಹೋಗಲಿಕ್ಕೆ ತಕ್ಕ ವಾತಾವರಣವನ್ನು ಕಲ್ಪಿಸಿಕೊಟ್ಟಿದ್ದರು. ಅರಸರ ಅಪೇಕ್ಷೆಯಂತೆ ವೆಂಕಟಪ್ಪನವರು ಅರಮನೆಯಲ್ಲಿ ಶಿಲ್ಪ ಕೃತಿಗಳ ರಚನೆಗೆ ತೊಡಗಿದರು. ಅರಸರು ಈ ಕಲಾವಿದನಿಗೆ ನೀಡಿದ ಪ್ರೋತ್ಸಾಹ ಅವರ ಕಲಾಭಿಮಾನಕ್ಕೆ ಸಾಕ್ಷಿಯಾಗಿದೆ. ಆಗ ದಂತಫಲಕದಲ್ಲಿ ರಚಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ ಭಾವಚಿತ್ರ ಹಾಗೂ ತಮ್ಮ ಕಲಾಗುರು ಅವನೀಂದ್ರನಾಥ ಠಾಗೂರರ ಭಾವಚಿತ್ರಗಳು ಲೋಕವಿಖ್ಯಾತ ಕೃತಿಗಳೆನ್ನಿಸಿವೆ. ಇವುಗಳಲ್ಲದೆ ಅನೇಕ ರಿಲೀಫುಗಳನ್ನೂ ಆಗ ರಚಿಸಿದರು. ಈ ಕೃತಿಗಳು ಅರಮನೆಯಲ್ಲಿ ಸದಾಕಾಲವೂ ರಾರಾಜಿಸುತ್ತಿರುವುದನ್ನು ಕಾಣಬಹುದು.

ಕಲ್ಕತ್ತೆಯಿಂದ ಹಿಂದಿರುಗಿ, ಅರಮನೆಯ ಆವರಣದಲ್ಲೋ, ಕಲಾಶಾಲೆಯಲ್ಲೋ ಕಲಾಸಾಧನೆಯಲ್ಲಿ ನಿರತರಾಗಿದ್ದಾಗ, ವೆಂಕಟಪ್ಪನವರಿಗೆ ವೈಣಿಕ ಶಿಖಾಮಣಿಯೆಂದು ಲೋಕವಿಖ್ಯಾತರಾದ ವೀಣೆ ಶೇಷಣ್ಣನವರ ಪರಿಚಯವಾಯಿತು. ಶೇಷಣ್ಣನವರ ವೀಣಾವಾದನ ಅವರ ಮೇಲೆ ತುಂಬಾ ಪ್ರಭಾವ ಬೀರಿತ್ತು. ಸರಳ ಸ್ವಭಾವದ ಸೌಜನ್ಯಮೂರ್ತಿಯಂತಿದ್ದ ಶೇಷಣ್ಣನವರ ವ್ಯಕ್ತಿತ್ವ ಹಾಗೂ

ಕಲೆಗೆ ಮಾರುಹೋಗಿ ಅವರಲ್ಲಿ ಶಿಷ್ಯವೃತ್ತಿ ಸ್ವೀಕರಿಸಿ ವೀಣೆ ಕಲಿಯಲು ತೊಡಗಿದರು. ವೀಣೆಯ ಅಭ್ಯಾಸದಲ್ಲಿ ನಿರತರಾದ ವೆಂಕಟಪ್ಪನವರು ಚಿತ್ರಕಲೆಯನ್ನು ಸಂಪೂರ್ಣವಾಗಿ ಮರತೇ ಬಿಡುವಂತಾಯಿತು. ಇದನ್ನು ಗಮನಿಸಿದ ಅವರ ಹಿತೈಷಿಗಳು ಅವನೀಂದ್ರನಾಥರಿಗೆ ವಿಷಯವನ್ನು ತಿಳಿಸಿ ಪತ್ರ ಬರೆದರು. ಇದನ್ನು ಅರಿತ ಅವನಿಂದ್ರನಾಥರು ತುಂಬಾ ನೊಂದುಕೊಂಡು "ಚಿತ್ರಕಲಾ ಕ್ಷೇತ್ರದಲ್ಲಿ ನಿನಗೆ ಉತ್ತಮ ಭವಿಷ್ಯವಿದೆ. ಶ್ರದ್ಧೆಯಿಂದ ಸಾಧಿಸಿಕೊಂಡ ಕಲೆಯನ್ನು ಕೈಬಿಡಬೇಡ" ಎಂದು ಎಚ್ಚರಿಸಿ ಪತ್ರವನ್ನು ಬರೆದರು. ಆ ಪತ್ರಕ್ಕೆ ಪ್ರತ್ಯುತ್ತರವಾಗಿ ವೀಣೆಯ ಹುಚ್ಚಿನಿಂದ ಗುರುಗಳಿಂದ ಕಲಿತ ಚಿತ್ರಕಲೆಯನ್ನು ಮರೆತ ಘಟನೆಯನ್ನು, ಅಪೂರ್ವವಾದ ರೀತಿಯಲ್ಲಿ ಸುಪ್ತ ಮನಸ್ಸಿನ ಭಾವನೆಗಳನ್ನು ತುಂಬ ಸಾಂಕೇತವಾಗಿ ನಿರೂಪಿಸುವ "ವೀಣೆಯ ಹುಚ್ಚು" ಎಂಬ ವರ್ಣಚಿತ್ರವೊಂದನ್ನು ರಚಿಸಿ ಅದನ್ನು ಗುರುಗಳಿಗೆ ಕಳಿಸಿಕೊಟ್ಟರು. ಆ ಚಿತ್ರದ ಸೂಕ್ಷ್ಮ ಕಲೆಗಾರಿಕೆಗೆ ಮನಸೋತ ಅವನೀಂದ್ರನಾಥರು ತಮ್ಮ ಶಿಷ್ಯ ಚಿತ್ರಕಲೆಯನ್ನು ಮರೆತಿಲ್ಲ, ಮರೆಯುವುದೂ ಸಾಧ್ಯವಿಲ್ಲ ಎಂಬ ಭರವಸೆಯನ್ನು ತಾಳಿದರು. ಈ ಘಟನೆ ವೆಂಕಟಪ್ಪನವರು ಕೆಲವು ವರ್ಷಗಳ ಕಾಲ ತಾವು ಸಂಪೂರ್ಣವಾಗಿ ತೊರೆದಿದ್ದ ಚಿತ್ರಕಲಾ ರಚನೆಯಲ್ಲಿ ಮತ್ತೆ ಉದ್ಯುಕ್ತರಾಗಲು ಸಹಾಯಕವಾಯಿತು.

ವೆಂಕಟಪ್ಪನವರದು ಸ್ವತಂತ್ರ ಮನೋವೃತ್ತಿ, ಯಾವುದೇ ನಿರ್ಬಂಧಕ್ಕೆ, ಕಟ್ಟುಪಾಡಿಗೆ, ಬಂಧನಕ್ಕೆ ಒಳಗಾಗಲು ಇಚ್ಚಿಸದ ಪ್ರವೃತ್ತಿ. ವೆಂಕಟಪ್ಪನವರ ಕಲಾಪ್ರತಿಭೆ ಹಾಗೂ ಖ್ಯಾತಿ ರಾಷ್ಟ್ರವ್ಯಾಪ್ತಿಯಾಯಿತು. ಇವರ ಗುರುಗಳಲ್ಲಿ ಒಬ್ಬರಾದ ಪರ್ಸಿ ಬ್ರೌನ್ ನಿವೃತ್ತರಾದಾಗ, ಕಲ್ಕತ್ತಾ ಕಲಾಶಾಲೆಯ ಪ್ರಚಾರ್ಯ ಪದವಿ ತೆರವಾಯಿತು. ಪರ್ಸಿ ಬ್ರೌನ್ ಈ ಸ್ಥಾನವನ್ನು ತುಂಬಲಿಕ್ಕೆ ಅರ್ಹನಾದ ವ್ಯಕ್ತಿ ಮೈಸೂರಿನ

ವೆಂಕಟಪ್ಪ ಎಂದು ಸೂಚಿಸಿದರು. ಅವರ ಸೂಚನೆಯಂತೆ ಬಂಗಾಳ ಸರ್ಕಾರದಿಂದ ಪ್ರಾಚಾರ್ಯಪದವಿಯನ್ನು ಒಪ್ಪಿಕೊಳ್ಳುವಂತೆ ಪತ್ರ ಬಂದಿತು. ಆದರೆ ಸ್ವತಂತ್ರವಾಗಿ ಬದುಕು ನಡೆಸಲು ನಿರ್ಧರಿಸಿದ್ದ ವೆಂಕಟಪ್ಪನವರು ವಿನಯಪೂರ್ವಕವಾಗಿ ಅದನ್ನು ತಿರಸ್ಕರಿಸಿ "ನಾನು ಕಲಾವಿದನಲ್ಲ, ಜೀವನದುದ್ದಕ್ಕೂ ಕಲಾವಿದ್ಯಾರ್ಥಿಯೇ ಆಗಿರುತ್ತೇನೆ. ಅಪಾರವಾದ ಕಲಾಸಾಗರದ ಆಳ ಅಗಲಗಳನ್ನು ಅರಿಯುವ ಮಹದಾಕಾಂಕ್ಷೆ ನನ್ನ ಬಾಳಿನ ಗುರಿ. ಈ ಪದವಿ, ಅಧಿಕಾರಗಳು ಇದಕ್ಕೆ ಅಡ್ಡಿಯಾಗುತ್ತವೆ. ಈ ಬಗೆಯ ಕೆಲಸ ನನ್ನ ಪ್ರವೃತ್ತಿಗೆ ಒಗ್ಗದು" ಎಂದು ಉತ್ತರಿಸಿದರು.

ಮತ್ತೊಮ್ಮೆ ದೆಹಲಿಯ ವೈಸ್‌ರಾಯ್ ಭವನವನ್ನು ಶೃಂಗರಿಸಲಿಕ್ಕೆ ವೆಂಕಟಪ್ಪನವರಿಗೆ ಕರೆಬಂತು. ಆಗಲೂ ಅದನ್ನು ತಿರಸ್ಕರಿಸಿ ಕನ್ನಡ ನಾಡಿನಲ್ಲೆ ಉಳಿದು ಕಲಾ ಸೇವೆಗೆ ತಮ್ಮ ಬದುಕನ್ನು ಮಿಸಲಾಗಿಟ್ಟುದು ನಿಜಕ್ಕೂ ಅಭಿನಂದನೀಯ ಸಂಗತಿ. ಹೀಗೆ ಬದುಕಿನುದ್ದಕ್ಕೂ ಯಾವ ಆಸೆ ಆಮಿಷಗಳಿಗೂ ಒಳಗಾಗದೆ ಕಲಾಸೇವೆಯನ್ನು ತಪಸ್ಸಿನಂತೆ ನಡೆಸಿ ಸ್ವತಂತ್ರ ಮನೋವೃತ್ತಿಯಿಂದ ಮೆರೆದ ಕೀರ್ತಿ ವೆಂಕಟಪ್ಪನವರದು.

ಬೆಂಗಳೂರಿಗೆ

ಕಲೆಗೆ, ಕಲಾವಿದರಿಗೆ ಹಾಗೂ ಕಲಾರಂಗಕ್ಕೆ ಯಾವುದೇ ರೀತಿಯಲ್ಲಿ ಅನ್ಯಾಯವಾಗಲೀ ಅಪಚಾರವಾಗಲಿ ಆದರೆ ಅದನ್ನು ಏಕಾಂಗಿಯಾಗಿ ಪ್ರತಿಭಟಿಸಿ ನಿಲ್ಲುವ ಕೆಚ್ಚು ವೆಂಕಟಪ್ಪನವರದು. ಕಲಾಭಿಮಾನಿಗಳಾದ ನಾಲ್ವಡಿ ಕೃಷ್ಣರಾಜ ಒಡೆಯರು ತೀರಿಕೊಂಡ ಬಳಿಕ ನಡೆದ ಒಂದು ಘಟನೆಯಿಂದ ತಮ್ಮ ಹಾಗೂ ತಮ್ಮ ಕಲಾಕೃತಿಗಳ ಬಗೆಗೆ ಹಗುರವಾಗಿ ನಡೆದುಕೊಂಡ ಅರಮನೆ ಹಾಗೂ

ಅರಮನೆಯ ಅಧಿಕಾರಿಗಳ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲೂ ಹಿಂಜರಿದವರಲ್ಲ. ಇಂಥ ಘಟನೆಗಳಿಂದ ಬೇಸರಗೊಂಡ ವೆಂಕಟಪ್ಪನವರು ಮೈಸೂರನ್ನು ತೊರೆದು, ತಮ್ಮ ಕಲಾಕೃತಿಗಳೊಡನೆ ಬೆಂಗಳೂರಿಗೆ ಬಂದು ನೆಲೆಸಿದರು. ಮತ್ತೊಮ್ಮೆ ಬಂಗಾಳಿ ಭಾಷೆಯ 'ಉದ್ಬೋಧನ' (ಸ್ವಾಮಿ ವಿವೇಕನಂದರಿಂದ ಆರಂಭ) ಎಂದು ಪತ್ರಿಕೆ ಇವರ 'ಅಂಗುಲೀಪ್ರದಾನ' (ಶ್ರೀರಾಮನು ಸೀತೆಗಾಗಿ ಆಂಜನೇಯನಿಗೆ ಉಂಗುರ ಕೊಡುತ್ತಿರುವುದು) ವೆಂಬ ಚಿತ್ರವನ್ನು ಪ್ರಕಟಿಸಿತು. ಚಿತ್ರ ಹೇಗೋ ತಿರುಗುಮರುಗಾಗಿ ಅಚ್ಚಾಗಿ ಶ್ರೀರಾಮ ಎಡಗೈಯಿಂದ ಉಂಗುರವನ್ನು ಕೊಡುತ್ತಿರುವಂತೆಯೂ, ಹನುಮಂತ ಎಡಗೈಯಿಂದ ಸ್ವೀಕರಿಸುತ್ತಿರುವಂತೆಯೂ ಕಾಣುತ್ತಿತ್ತು. ಇದನ್ನು ಗಮನಿಸಿದ ವೆಂಕಟಪ್ಪನವರು 'ರಾಮ ಮುದ್ರಿಕೆಯನ್ನು ಎಡಗೈಯಿಂದ ನೀಡುವುದು, ಹನುಮಂತ ಎಡಗೈಯಿಂದ ಸ್ವೀಕರಿಸುವುದು ಎಲ್ಲಾದರೂ ಉಂಟೆ ? ಎಂಥ ಅಪಚಾರ ! ಸಂಪಾದಕರಿಗೆ ಇದು ಅಸಭ್ಯ, ಅನುಚಿತ ಎಂದಾದರೂ ತಿಳಿಯಬೇಡವೇ ?' ಎಂದು ಸಿಟ್ಟಿಗೆದ್ದರು. ತಮ್ಮ ತಪ್ಪನ್ನು ತಿದ್ದಿಕೊಂಡು ಓದುಗರ ಕ್ಷಮೆ ಕೇಳುವಂತೆ ಸೂಚಿಸಿ ಸಂಪಾದಕರಿಗೆ ಪತ್ರ ಬರೆದರು. ಸಂಪಾದಕರು ಆ ಪತ್ರಕ್ಕೆ ಯಾವ ಮನ್ನಣೆಯನ್ನೂ ಕೊಡದೆ ಉದಾಸೀನದಿಂದ ವರ್ತಿಸಿದರು. ಕುಪಿತರಾದ ವೆಂಕಟಪ್ಪನವರು ಕಲಾವಿದನಿಗೆ ಅಪಮಾನವಾಗಿದೆಯೆಂದೂ, ಈ ಅನ್ಯಾಯವನ್ನು ಸರಿಪಡಿಸಬೇಕೆಂದೂ ಕಲ್ಕತ್ತೆಯ ಹೈಕೋರ್ಟಿನಲ್ಲಿ ಮೊಕದ್ದಮೆ ಹೂಡಿ ಗೆದ್ದರು. ನ್ಯಾಯಾಲಯದ ಆದೇಶದಂತೆ ಸಂಪಾದಕರು ಕಲಾವಿದರಿಗೆ ಕೇವಲ ಒಂದು ರೂಪಾಯಿನ ಕುರುಹು ತಪ್ಪುಕಾಣಿಕೆಯನ್ನು ವಿಧಿಸಿದರು. ಇಂತಹ ನಿದರ್ಶನಗಳಿಂದ ಕಲೆಗೆ ಹಾಗೂ ಕಲಾವಿದರಿಗೆ ಆದ ಅನ್ಯಾಯವನ್ನು ಅವರು ಹೇಗೆ ಧಿಕ್ಕರಿಸುತ್ತಿದ್ದರು ಎಂಬುದನ್ನು ಅರಿಯಬಹುದು.

ನಾಲ್ವಡಿ ಕೃಷ್ಣರಾಜ ಒಡೆಯರು ಗತಿಸಿದ ಬಳಿಕ, ಅರಮನೆಯ ಅಧಿಕಾರಿಗಳ ವರ್ತನೆಯಿಂದ ಬೇಸತ್ತ, ಸ್ವಾಭಿಮಾನಿಗಳಾ ವೆಂಕಟಪ್ಪನವರು ತುಂಬಾ ನೊಂದುಕೊಂಡು ತಮಗೆ ಪ್ರಿಯವಾಗಿ ಮೈಸೂರು ಹಾಗೂ ಅರಮನೆಯ ಸಂಬಂಧವನ್ನು ಸಂಪೂರ್ಣವಾ ಕಡಿದುಕೊಂಡು ಬೆಂಗಳೂರಿನಲ್ಲಿ ನೆಲೆಸಲು ತೀರ್ಮಾನಿಸಿದ ಮೇ ೧೯೪೬ರಲ್ಲಿ ತಮ್ಮ ೬೦ನೆಯ ವಯಸ್ಸಿನಲ್ಲಿ ಬೆಂಗಳೂರಿನ ಮಲ್ಲೇಶ್ವ ಬಡಾವಣೆಯ ಪ್ರಶಾಂತ ಅವರಣದಲ್ಲಿ ವಿಶಾಲವಾದ ಬಯಲಿ ದಟ್ಟವಾದ ಮರಗಿಡಗಳ ನಡುವೆ ತಮ್ಮ ಅಭಿರುಚಿಗೆ ತಕ್ಕಂ ಕಲಾಮಂದಿರವೊಂದನ್ನು ನಿರ್ಮಿಸಿಕೊಂಡು, ಆ ವಲ್ಮೀಕದಲ್ಲೆ ತಮ ಕಲಾತಪಸ್ಸನ್ನು ಮುಂದುವರಿಸಿದರು. ಅಲ್ಲಿಯೇ ತಾವು ರಚಿಸಿದ ಎ ಕೃತಿಗಳನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿ ಸಾರ್ವಜನಿಕರಿಗೆ ಪ್ರವೇಶ ಅವಕಾಶವನ್ನು ಒದಗಿಸುತ್ತಿದ್ದರು. ಆದರೂ ಕಲೆಯ ಬಗೆಗೆ ಜನರಲ್ಲಿ ಅನಾದರ, ಸರಕಾರದ ಅಲಸ್ಯ ಇವುಗಳನ್ನು ಕಂಡು "ಕಲೆಯ ನಮ್ಮ ಜನರಿಗೆ ಅಭಿರುಚಿ ಕಡಿಮೆ" ಎಂದು ನಿಟ್ಟುಸಿರು ಬಿಡುತ್ತಿದ್ದ ಆ ಮಾತಿನ ಹಿಂದೆ ಅವರ ಬದುಕಿನ ಕಟು ಸತ್ಯ ಅಡಗಿದಂತಿತ್ತು. ಕಲಾವಿದನ ಹಿರಿಮೆಯನ್ನು ಅರಿತೂ ಜನತೆ ಅವರನ ಉದಾಸೀನದಿಂದ ಕಂಡಿತು. ನಾಡಿಗೆ ಅವರಿಂದ ಹೆಚ್ಚಿನ ಕಲಾಸೇವೆ ಅವಕಾಶವಿಲ್ಲದಂತಾಯಿತು. ಆದರೂ ವೆಂಕಟಪ್ಪನವರ ಉಳಿದಿರು ಕೆಲವು ಕೃತಿಗಳೇ ನಾಡಿನ ಅಮೂಲ್ಯ ಆಸ್ತಿಯಾಗಿವೆ.

ಸಿದ್ಧಹಸ್ತರು

ವೆಂಕಟಪ್ಪನವರು ಮದರಾಸು ಮತ್ತು ಕಲ್ಕತ್ತೆಯಲ್ಲಿ ಆರಂಭ ದಿನಗಳಲ್ಲಿ ಅಭ್ಯಾಸಿಸಿದ ಭಾರತೀಯ ಮತ್ತು ಇತರ ಕ ಪರಂಪರೆಯಿಂದ ಮುಂದೆ ತಮ್ಮದೇ ಆದ ವಿಶಿಷ್ಟ ಶೈಲಿಯ

ಬೆಳೆಸಿಕೊಂಡರು. ಪ್ರಕೃತಿಯಲ್ಲಿನ ವರ್ಣವಿನ್ಯಾಸ ಹಾಗೂ ನೆರುಳು ಬೆಳಕಿನ ಬಗೆಗಿನ ಅವರ ಆಸಕ್ತಿ ತುಂಬಾ ಗಾಢವಾದುದು. ಜಲವರ್ಣ ಚಿತ್ರ ರಚನೆಯಲ್ಲಿ ಇವರಷ್ಟು ಸಿದ್ಧಹಸ್ತರಾದವರು ವಿರಳ. ಈ ಮಾಧ್ಯಮ ಕಷ್ಟಸಾಧ್ಯವಾದ ಕಲೆಗಾರಿಕೆ. ಒಮ್ಮೆ ವರ್ಣಗಳನ್ನು ಬಳಸಿದರೆ ಮತ್ತೆ ಮೇಲಿಂದ ಮೇಲೆ ತೈಲವರ್ಣಗಳಂತೆ ಬಳಸುವಂತಿಲ್ಲ. ಪ್ರಕೃತಿ ರಚನಾ ಪ್ರಕಾರದಲ್ಲಿ ವೆಂಕಟಪ್ಪನವರು ತಮ್ಮ ಪ್ರಾವೀಣ್ಯವನ್ನು ಮೆರೆಸಿದ್ದಾರೆ. ಇವರ ಪ್ರತಿಯೊಂದು ಕೃತಿಯಲ್ಲೂ ವರ್ಣಸ್ವಚ್ಛತೆ ಎದ್ದು ಕಾಣುತ್ತದೆ. ಹಿಮಾಲಯ, ನೀಲಗಿರಿ, ಕೊಡೈಕೆನಾಲ್ ಮತ್ತು ಚಾಮುಂಡಿ ಬೆಟ್ಟಗಳ ಪ್ರಾಕೃತಿಕ ದೃಶ್ಯಗಳನ್ನು ಬೇರೆ ಬೇರೆ ಋತುಗಳಲ್ಲಿ ವೈವಿಧ್ಯಮಯವಾಗಿ ರಚಿಸಿದ್ದಾರೆ. ನೀಲಗಿರಿಯ ನಿಸರ್ಗದ ರಮ್ಯ ದೃಶ್ಯಗಳನ್ನು ವೀಕ್ಷಿಸಿದ ಕಾವ್ಯರ್ಷಿ ಕುವೆಂಪು ಅವರು ಆ ಚಿತ್ರಗಳ ಪ್ರಕೃತಿ ಸೌಂದರ್ಯಕ್ಕೆ ಮಾರುಹೋಗಿ 'ವರ್ಣ ಶಿಲ್ಪ' ಎಂಬ ಕವನವೊಂದನ್ನು ಬರೆದು ತಮಗಾದ ಆನಂದಾನುಭವವನ್ನು ಮಾತುಗಳಲ್ಲಿ ಸೆರೆಹಿಡಿದಿದ್ದಾರೆ. ಒಂದೊಂದು ಋತುವಿನಲ್ಲೂ ಕಂಡುಬರುವ ವಿಶಿಷ್ಟವಾದ ವರ್ಣವೈವಿಧ್ಯವನ್ನು ಅಪೂರ್ವವಾಗಿ ಸೆರೆಹಿಡಿದಿರುವುದನ್ನು ಅವರ ಕೃತಿಗಳಲ್ಲಿ ಕಾಣಬಹುದು. ಅಲ್ಲದೆ ಪ್ರತಿಯೊಂದು ಕೃತಿಯಲ್ಲಿಯೂ ಅವರು ಅತಿಸೂಕ್ಷ್ಮವಾದ ರೇಖಾ ವಿನ್ಯಾಸ ಹಾಗೂ ವರ್ಣವೈಖರಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಅದರಲ್ಲೂ ಊಟಿ ಮತ್ತು ಕೊಡೈಕೆನಾಲ್ ಚಿತ್ರಗಳು ಕಣ್ಣಿಗೆ ಹಬ್ಬವನ್ನುಂಟುಮಾಡುತ್ತವೆ. ಬಿಳಿಯ ವರ್ಣವನ್ನು ಬಳಸದೆಯೇ ಕೃತಿ ರಚಿಸುವ ಕೌಶಲವನ್ನು ಇದರಲ್ಲಿ ಕಾಣಬಹುದು. ರಾತ್ರಿಯು, ಸಂಜೆಯು, ಬೆಳದಿಂಗಳ, ಪ್ರಕೃತಿಯ ಪ್ರತಿಬಿಂಬವನ್ನು ಸೆರೆಹಿಡಿದ ಸರೋವರ, ದಟ್ಟಕಾನನದ, ಮಳೆಗರೆದ, ಮಂಜುಗವಿದ ಗಿರಿಸಾಲುಗಳು, ಸುರ್ಯೋದಯ ಹಾಗೂ ಸೂರ್ಯಾಸ್ತದ ಪ್ರಕೃತಿಯ ಪ್ರತಿರೂಪಗಳನ್ನು ಬಹು ಸ್ವಾಭಾವಿಕ ವರ್ಣಗಳಲ್ಲಿ ಚಿತ್ರಿಸಿದ್ದಾರೆ.

ಜಲವರ್ಣ ಪ್ರಕೃತಿ ಚಿತ್ರಗಳ ಜೊತೆಗೆ, ವೆಂಕಟಪ್ಪನವರು ದಂತ ಫಲಕದ ಮೇಲೆ ಜಲವರ್ಣದಲ್ಲಿ ರೂಪಚಿತ್ರ ಹಾಗೂ ಕಾವ್ಯ ಕಥಾನಕಗಳನ್ನೂ ಚಿತ್ರಿಸಿದ್ದಾರೆ. ದಂತದ ಫಲಕದ ಮೇಲೆ ನೀರು ಮತ್ತು ಬಣ್ಣಗಳನ್ನು ನಿಲ್ಲಿಸುವುದೇ ಒಂದು ಸಾಹಸದ, ಶ್ರಮದ, ಜಾಣ್ಮೆಯ ಕೆಲಸ. ಅಂತಹುದರಲ್ಲೂ ಅದ್ಭುತ ಕೃತಿಗಳನ್ನು ನೀಡಿದ ಯಶಸ್ಸು ವೆಂಕಟಪ್ಪನವರದು. ಅವನಿಂದ್ರನಾಥ ಠಾಗೂರ್, ಕೂಚ್ ಬಿಹಾರ್‌ನ ಮಹಾರಾಜರ ಎರಡು ಭಾವಚಿತ್ರಗಳು ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ ಚಿತ್ರಗಳೂ ಆಚಾರ್ಯ ಕೃತಿಗಳೆನಿಸಿವೆ. ಈ ಕೃತಿಗಳಲ್ಲಿ ವಿಶಿಷ್ಟವಾದ, ವೈವಿಧ್ಯಮಯವಾದ ವರ್ಣಸಂಯೋಜನೆ, ವ್ಯಕ್ತಿಗಳ ವ್ಯಕ್ತಿತ್ವವನ್ನು ಹಾಗೂ ಗುಣಶೀಲವನ್ನು ಪ್ರಕಾಶಪಡಿಸುವಂಥ ಸೂಕ್ಷ್ಮ ಕಲೆಗಾರಿಕೆಯ ಪ್ರದರ್ಶನವಿದೆ. ಇಲ್ಲಿ ತೋರಿಬರುವ ಕಲೆಗಾರಿಕೆ, ಕುಂಚಕೌಶಲ ಕೌತುಕಪಡುವಂತಿದೆ. ಸೂಕ್ಷ್ಮ ದರ್ಶಕ ಯಂತ್ರದ ಸಹಾಯದಿಂದ ನೋಡಿದಾಗ ಅಲ್ಲಿನ ವರ್ಣಗಳ, ರೇಖಾವಿನ್ಯಾಸಗಳ ಜೀವಾಳ ವ್ಯಕ್ತವಾಗುತ್ತದೆ. ಆಕೃತಿಗಳ ಕಣ್ಣುಗಳಲ್ಲಿ ಜೀವತುಂಬಲು ಇವರು ಬಳಸಿರುವ ವರ್ಣಗಳು ಆಶ್ಚರ್ಯಪಡುವಂಥವು. ಈ ಕೃತಿಗಳಲ್ಲಿ ತೋರಿಬರುವ ಕುಂಚದ ವೈಭವಕ್ಕೆ ಕಲಾವಿದರ ಬಹುದಿನದ ಅಪಾರ ಅನುಭವ ಹಾಗೂ ಸಾಧನೆಯೇ ಕಾರಣವೆನ್ನಬೇಕು. ಈ ಕೃತಿಗಳಲ್ಲಿ ಹಲವು ಈಗ ಕಾಣಸಿಕ್ಕುವುದಿಲ್ಲ. ಒಂದೊಂದು ಕೃತಿಯೂ ವೆಂಕಟಪ್ಪನವರ ಶ್ರೇಷ್ಠ ಕಲೆಗಾರಿಕೆಯ ದ್ಯೋತಕಗಳಾಗಿದೆ.

ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ರಿಲೀಫ್ ಕೆಲಸದಲ್ಲೂ ವೆಂಕಟಪ್ಪನವರು ಚಿತ್ರಕಲೆಯಷ್ಟೇ ಅದ್ವಿತೀಯವಾದ ಪ್ರೌಢಿಮೆಯಿಂದ ಮೆರೆದಿದ್ದಾರೆ, ಇದು ವರ್ಣರಹಿತ ಕಲೆ. ಆದರೂ ವರ್ಣಗಳ ಪ್ರಭಾವವನ್ನು ಕೃತಿಗಳಲ್ಲಿ ಮೂಡಿಸಬೇಕು. ಅವುಗಳ ರಚನೆಯಲ್ಲಿ

ಉಬ್ಬುತಗ್ಗುಗಳ ಕೌಶಲ ಮುಖ್ಯವಾದದ್ದು. ಅದು ಎಷ್ಟು ಸೂಕ್ಷ್ಮವಾಗಿರುತ್ತದೋ ಅಷ್ಟೇ ಶಿಲ್ಪಿಯ ಕಲಾಭಿಜ್ಞತೆ ವ್ಯಕ್ತವಾಗುತ್ತದೆ. ಈ ಪ್ರತಿಮೆಗಳಲ್ಲಿ ಮೂರು ಕೃತಿಗಳು ಗಮನಾರ್ಹ. ಅವರ ಸಂಗೀತ ಗುರುಗಳಾದ ವೀಣೆ ಶೇಷಣ್ಣನವರ ಕೃತಿ ಅವುಗಳಲ್ಲೊಂದು. ಈ ಕೃತಿಯನ್ನು ಕಡೆಯುವಲ್ಲಿ ಅವರಿಗೆ ತನ್ನ ಗುರುವಿನ ಬಗೆಗಿದ್ದ ಭಕ್ತಿ ಭಾವಗಳನ್ನೆಲ್ಲಾ ಎರಕ ಹೊಯ್ದಿರುವಂತೆ ಭಾಸವಾಗುತ್ತದೆ. ಗಂಭೀರವಾದ ಮುಖ ಮುದ್ರೆ, ಸೊಗಸಾಗಿ ಸುತ್ತಿದ ರುಮಾಲು, ಹುಬ್ಬುಗಳು. ಪ್ರಕಾಶ ಮಾನವಾಗಿ ಹೊಳೆಯುವ ಜೀವಂತ ಕಣ್ಣುಗಳು, ಹೊರವಾದ ಮೀಸೆ, ದುಂಡಾದ ಗಲ್ಲ, ಕೋಟಿನ ಮೇಲೆ ಅಗಲವಾದ ಕುಸುರುಗೆಲಸದ ಅಂಚಿನಿಂದ ಕೂಡಿದ ಉತ್ತರೀಯ. ಒಂದೊಂದೂ ಶೇಷಣ್ಣನವರ ರೂಪ, ಗುಣ, ಶೀಲ ಮತ್ತು ಸತ್ವವನ್ನು ವ್ಯಕ್ತಪಡಿಸುತ್ತ, ನಮ್ಮ ಕಣ್ಣೆದುರಿಗೆ ಶೇಷಣ್ಣನವರೇ ನಿಂತಿದ್ದಾರೇನೋ ಎಂಬ ಭ್ರಮೆ ಮೂಡಿಸುತ್ತದೆ.

ಇನ್ನೊಂದು ಇಂಥದೇ ಕೃತಿ ಗುರುದೇವ ರವೀಂದ್ರರ ಪ್ರತಿಮೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿರುವ ಈ ಕೃತಿ, ೧೯೨೨ರಲ್ಲಿ ರವೀಂದ್ರನಾಥರು ಮೈಸೂರಿಗೆ ಬಂದಾಗ ಅವರ ಐದಾರು ಭಂಗಿಗಳ ರೂಪಚಿತ್ರಗಳ ನೆರವಿನಿಂದ ರಚಿಸಿದ ಕೃತಿ. ಮಹಾಕವಿಯ ಪ್ರಶಾಂತ ಮುಖಮುದ್ರೆಯನ್ನೂ, ಉದ್ದವಾದ ಗಡ್ಡದ ಕೂದಲ ಎಳೆ ಎಳೆಗಳನ್ನೂ ಬಿಡಿಸಿರುವ ರೀತಿ, ಮಾತನಾಡುತ್ತಿರುವಂತೆ ತೋರಿಬರುವ ತುಟಿಗಳ ಮೇಲೆ ಬಿದ್ದಿರುವ ಮೀಸೆ, ನೀಳವಾದ ನಾಸಿಕ ಬಿಡಿಸಿ ತೋರಿಸುವಲ್ಲಿ ಮೆರೆದಿರುವ ನಯವಾದ ಕಲೆಗಾರಿಕೆಗೆ ಎಂಥವರು ತಲೆದೂಗದಿರಲಾರರು. ತಮ್ಮ ಕಲಾಕೃತಿಗಳಿಗೆ ವಸ್ತುಗಳಾಗಿ ಗಣ್ಯ ವ್ಯಕ್ತಿಗಳನ್ನೇ ವಿಶೇಷವಾಗಿ ಆರಿಸಿಕೊಂಡರೂ, ಶ್ರೀ

ಸಾಮಾನ್ಯರನ್ನೂ ನಿರ್ಲಕ್ಷಿಸಿಲ್ಲವೆಂಬುದಕ್ಕೆ ಅವರ 'ಮಾಣಿ' ಕೃತಿಯೇ ಸಾಕ್ಷಿ ಇದೊಂದು ಅಪೂರ್ವ ಕೃತಿ. ಇದರಲ್ಲಿ ಬಾಲಕನ ಮುಗ್ಧ ಸ್ವಭಾವ ಅತ್ಯಂತ ಸಹಜವಾಗಿ ಮೂಡಿಬಂದಿದೆ. ಕಿವಿಯ ಸುತ್ತುಮುರಿ, ಬೋಳು ತಲೆಯ ನಡುವೆ ಬತ್ತಿಯಂತಿರುವ ಪುಡಿಜುಟ್ಟು, ಕುತೂಹಲಭರಿತವಾದ ಹೊಳಪು ಕಣ್ಣುಗಳಿಂದ ಕೂಡಿದ ಈ ವಿಶಿಷ್ಟ ಕೃತಿ ಎಂಥವರನ್ನೂ ಸೆರೆಹಿಡಿಯುತ್ತದೆ.

ವಿಶಿಷ್ಟ ಕೃತಿಗಳು

ವೆಂಕಟಪ್ಪನವರು ನಾಲ್ವಡಿ ಕೃಷ್ಣರಾಜ ಒಡೆಯರ ಅಪೇಕ್ಷೆಯಂತೆ ಅರಮನೆಯ ಅಂಬಾವಿಲಾಸ ಸಭಾಂಗಣಕ್ಕೆಂದು ರಚಿಸಿದ ಶಿಲ್ಪಕೃತಿಗಳು ಹಲವು ದೃಷ್ಟಿಯಿಂದ ವಿಶಿಷ್ಟ ಕೃತಿಗಳೆನ್ನಬಹುದು. ಅವುಗಳಲ್ಲಿ ಸಿದ್ಧಾರ್ಥನ ರಾಜ್ಯ ಪರಿತ್ಯಾಗ, ಬುದ್ಧ ಮತ್ತು ಶಿಷ್ಯ, ಅಂಗುಲೀ ಪ್ರಧಾನ, ದ್ರೋಣರು ಪಾಂಡವರಿಗೆ ಬಿಲ್ವಿದ್ಯೆಯನ್ನು ಕಲಿಸುತ್ತಿರುವುದು, ಧನುರ್ವಿಧ್ಯಾಭ್ಯಾಸದಲ್ಲಿ ತೊಡಗಿರುವ ಏಕಲವ್ಯ, ಶಿವತಾಂಡವ ನೃತ್ಯ, ಶಕುಂತಲೆಯ ಬೀಳ್ಕೊಡುಗೆ ಮುಖ್ಯವಾದುವು. ಈ ಕೃತಿಗಳಲ್ಲಿ ಕಲಾವಿದರು ಒಂದೊಂದು ಪ್ರಸಂಗವನ್ನೂ ಆಳವಾಗಿ ಅಧ್ಯಯನ ಮಾಡಿ, ಸನ್ನಿವೇಶದ ಬಗೆಗೆ ಚಿಂತನ ನಡೆಸಿ ಅಲ್ಲಿ ಬರುವ ವ್ಯಕ್ತಿಗಳ ಗುಣಶೀಲ, ಸ್ವಭಾವ ಹಾಗೂ ಮನೋಧರ್ಮಗಳನ್ನೂ ಶಿಲ್ಪದಲ್ಲಿ ಪಡಿಮೂಡಿಸಿರುವುದನ್ನು ಅರಿಯಬಹುದಾಗಿದೆ. ಸಿದ್ಧಾರ್ಥನ ರಾಜ್ಯ ಪರಿತ್ಯಾಗದಲ್ಲಿ, ಅವನ ಮುಖದಲ್ಲಿ ಶಾಂತ ಹಾಗೂ ನಿರ್ವೇಗಭಾವಗಳು, ದೃಢ ನಿರ್ಧಾರವೊಂದನ್ನು ಕೈಗೊಂಡ ಎಲ್ಲ ಲಕ್ಷಣಗಳೂ ಮುಖದಲ್ಲಿ ಚೆನ್ನಾಗಿ ಅಭಿವ್ಯಕ್ತಿ ಪಡೆದಿವೆ ಧನುರ್ವಿದ್ಯಾಭ್ಯಾಸದಲ್ಲಿ ತೊಡಗಿರುವ ಏಕಲವ್ಯನಲ್ಲಿ ಗುರುವಿನ

ಬಗೆಗಿರುವ ಭಕ್ತಿಭಾವ ಹಾಗೂ ಶ್ರದ್ಧಾಸಕ್ತಿಗಳು ವ್ಯಕ್ತವಾಗಿರುವ ರೀತಿ ಅನುಪಮವಾಗಿದೆ. ಕೌರವ ಪಾಂಡವರಿಗೆ ಆಚಾರ್ಯರು ಬಿಲ್ವಿದ್ಯೆಯನ್ನು ಕಲಿಸುತ್ತಿರುವ ದೃಶ್ಯದ ರಮ್ಯ ನೋಟವು ಅಸದೃಶವಾದುದಾಗಿದೆ. ಶಿವತಾಂಡವದ ಅಪೂರ್ವ ಕೃತಿ ಆಕರ್ಷಕವಾದ ಭಂಗಿಯಲ್ಲಿ ಹೃದಯವನ್ನು ಸೆಳೆಯುತ್ತದೆ. ನೃತ್ಯದಲ್ಲಿ ತಲ್ಲೀನನಾಗಿರುವ ಶಿವನ ಪ್ರಮಾಣಬದ್ಧವಾದ ಅಂಗವಿನ್ಯಾಸದ ರಚನೆ ಎದ್ದುಕಾಣುವಂತಿದೆ. ಶಕುಂತಲೆಯ ಬೀಳ್ಕೊಡುಗೆಯ ದೃಶ್ಯ ಮತ್ತೊಂದು ಅಸಾಧಾರಣ ಕೃತಿ. ತನ್ನ ಪತಿಯು ರಾಜಗೃಹಕ್ಕೆ ತೆರಳುತ್ತಿರುವ ಶಕುಂತಲೆಯ ಮುಖದಲ್ಲಿ ಬಹುದಿನಗಳ ನಂತರ ಪತಿಯನ್ನು ಸೇರುವೆನೆಂಬ ಸಂತೋಷ, ಕಾತರ ಒಂದು ಕಡೆಯಾದರೆ, ಹೊಸಜನ ಹೊಸ ಸ್ಥಳದ ಅನುಭವವನ್ನು ಎದುರಿಸುವ ಕುತೂಹಲಭರಿತ ಸಂತೋಷ ಹಾಗೂ ಆಪ್ತೇಷ್ಟರನ್ನು ಬಿಟ್ಟು ತೆರಳುವ ವೇದನೆ ಮತ್ತೊಂದು ಕಡೆ. ಹೀಗೆ ಶಕುಂತಲೆಯ ಮುಖದಲ್ಲಿ ಅನೇಕ ಭಾವಗಳ ಮಿಶ್ರಣವನ್ನು ಕಾಣಬಹುದು. ಈ ಮಧ್ಯೆ ಆಕೆ ಸಾಕಿದ ಜಿಂಕೆಯೊಂದು ಅವಳನ್ನು ಬಿಟ್ಟಿರಲಾರನೆಂಬ ಭಾವದಿಂದ ಸೀರೆಯನ್ನು ಹಿಡಿದೆಳೆಯುವ ಕರುಣಾಪೂರ್ಣ ದೃಶ್ಯ ಎಂಥವರ ಮನವನ್ನೂ ಕಲಕುವುದರಲ್ಲಿ ಸಂಶಯವಿಲ್ಲ. ಹೀಗೆ ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ರಿಲೀಫ್ ಕೃತಿಗಳು ಅದ್ವಿತೀಯವಾಗಿ ಕಲಾ ಪ್ರೌಢಿಮೆಯಿಂದ ಕೂಡಿದ್ದು ಶಿಲ್ಪಕಲಾ ಜಗತ್ತಿನಲ್ಲಿ ವೆಂಕಟಪ್ಪನವರ ಸ್ಥಾನವನ್ನು ಅಮರವಾಗಿರಿಸಿವೆ.

ಸಂಗೀತದಲ್ಲಿ ವೆಂಕಪ್ಪನವರಿಗಿದ್ದ ಶ್ರದ್ಧೆ, ಆಸಕ್ತಿ ಹಾಗೂ ವಿದ್ವತ್ತುಗಳನ್ನು ಕುರಿತು ಹೇಳದಿದ್ದರೆ ಅವರ ವ್ಯಕ್ತಿಚಿತ್ರ ಅಪೂರ್ಣವೆಂದೇ ಹೇಳಬೇಕು. ಚಿತ್ರಕಲೆಯಲ್ಲಿ, ಶಿಲ್ಪದಲ್ಲಿ ಕಲಾನೈಪುಣ್ಯವನ್ನು ಸಾಧಿಸಿದ್ದಂತೆಯೇ ಇವರು ಸಂಗೀತಕಲೆಯಲ್ಲೂ

ಸಿದ್ಧಿಯನ್ನು ಪಡೆದಿದ್ದರು. ಒಂದು ಅರ್ಥದಲ್ಲಿ ಚಿತ್ರಕಲೆ ಹಾಗೂ ಶಿಲ್ಪ ಜೀವನೋಪಾಯಕ್ಕೆ ಸಾಧನಗಳಾದರೆ, ವೀಣಾವಾದನ ಕೇವಲ ಆತ್ಮ ಸಂತೋಷಕ್ಕಾಗಿ ಕಲಿತ ಕಲೆ.

ಕಲ್ಕತ್ತೆಯಲ್ಲಿದ್ದಾಗಲೇ ಅವರಿಗೆ ಮೈಸೂರಿನ ವೀಣೆ ಶೇಷಣ್ಣನವರ ಶಿಷ್ಯರಾದ ಶ್ರೀರಂಗಂ ರಾಮಸ್ವಾಮಿ ಅಯ್ಯಂಗಾರರ ಪರಿಚಯವಾಯ್ತು. ಅವರ ಪರಿಚಯದ ಫಲವಾಗಿ ವೆಂಕಟಪ್ಪನವರಲ್ಲಿ ವೀಣೆ ಕಲಿಯುವ ಆಸೆ ಮೊಳೆಯಿತು. ಅನಂತರ ಮೈಸೂರಿಗೆ ಹಿಂತಿರುಗಿದ ಮೇಲೆ ವೀಣೆ ಶೇಷಣ್ಣನವರ ಪದತಲದಲ್ಲಿ ಕುಳಿತ ವೀಣೆ ಕಲಿಯುವ ಭಾಗ್ಯ ಅವರದ್ದಾಯಿತು. ಅವರು ಸುಮಾರು ಏಳ ವರ್ಷಗಳ ಕಾಲ ವೀಣೆಯ ಹುಚ್ಚಿನಲ್ಲಿ ಮೈ ಮರೆತಿದ್ದರು ಶೇಷಣ್ಣನವರಾದರೋ ಶಿಷ್ಯನಿಗೆ ಸಂಗೀತದಲ್ಲಿರುವ ಅಪರಿಮಿ ಆಸಕ್ತಿಯನ್ನು ಗುರುತಿಸಿ ವೀಣಾವಾದನದ ಸೂಕ್ಷ್ಮಗಳನ್ನೆ ಮುಚ್ಚುಮರೆಯಿಲ್ಲದೆ ಶಿಷ್ಯನಿಗೆ ಧಾರೆಯೆರೆದರು. ಗುರುಗ ಹೃದಯವನ್ನು ಗೆದ್ದ ವೆಂಕಟಪ್ಪನವರು ವೀಣಾವಾದನದಲ್ಲಿ ವಿಶೇ ಪ್ರೌಢಿಮೆಯನ್ನು ಸಾಧಿಸಿದರು. ಆದರೆ ತಾವು ಕಲಿತ ಸಂಗೀ ವಿದ್ಯೆಯನ್ನು ಯಾರಿಗೂ ಹೇಳಿಕೊಡಲು ಇಚ್ಛಿಸುತ್ತಿರಲಿಲ್ಲ. ಅಷ್ಟೆ ಅಲ್ಲ, ಸಂಗೀತ ಕಚೇರಿಗೂ ಒಪ್ಪುತ್ತಿರಲಿಲ್ಲ. ವೀಣಾವಾದನ ಕೇವ ತಮ್ಮ ಆತ್ಮಸಂತೋಷಕ್ಕಾಗಿ ಎಂಬುದು ಅವರ ಭಾವನೆಯಾಗಿತ್ತ ರಾತ್ರಿ ಊರೆಲ್ಲ ಮಲಗಿದ ಬಳಿಕ, ಬಸ್ಸು, ಕಾರುಗಳ ಓಡಾ ನಿಂತಮೇಲೆ, ಇಡೀ ನಗರ ಸ್ತಬ್ಧವಾದ ನಂತರ ಪ್ರಶಾಂ ವಾತಾವರಣದಲ್ಲಿ ವೀಣೆ ನುಡಿಸಲು ತೊಡಗುತ್ತಿದ್ದರು. ಇವ ವೀಣಾವಾದನ ಕೇಳಲು ಎಲ್ಲರಿಗೂ ಅವಕಾಶವಿರಲಿ ಶ್ರೀಯುತರುಗಳಾದ ಡಿ.ವಿ.ಜಿ., ವಿ.ಸೀ ಇಂತಹ ಅಹ್ವಾನಿ

ಪರಿಚಯಸ್ಥರಿಗೆ ಮಾತ್ರ ಸಾಧ್ಯವಿತ್ತು. ಸಾಮಾನ್ಯವಾಗಿ ಅವರ ಸಾಧನೆ ರಾಗಾಲಾಪನೆಯಿಂದ ಆರಂಭವಾಗಿ ರಾಗದ ವಿಸ್ತಾರವನ್ನು ಸಿಂಹಾವಲೋಕನ ಕ್ರಮದಲ್ಲಿ ವಿನ್ಯಾಸ ಮಾಡುತ್ತಿದ್ದರು. ರಾಗದ ಚೌಕಟ್ಟಿನ ಒಂದೊಂದು ಭಾಗವನ್ನೂ ವಿಂಗಡ ವಿಂಗಡವಾಗಿ, ಅಲೆ ಅಲೆಯಾಗಿ ವಿನ್ಯಾಸ ಮಾಡುತ್ತಿದ್ದರು. ಒಂದೊಂದು ಅಲೆಯ ಏರುಜಾರು, ಇಳಿವ ಜಾರು, ಗಮಕಗಳನ್ನು ನುಡಿಸಿ ಸ್ಥಾಯಿ ಭಾವಗಳನ್ನು ಒತ್ತಿತೋರಿಸುವುದು ಅವರ ಅಭ್ಯಾಸ. ಎಲ್ಲವೂ ಎಷ್ಟು ಬೇಕೋ ಅಷ್ಟು. ಔಚಿತ್ಯದ ಮಿತಿಯನ್ನು ಮೀರುತ್ತಿರಲಿಲ್ಲ. ಇಡೀ ರಾತ್ರಿ ಒಂದೊಂದೇ ರಾಗ ಅಥವಾ ಲಯಗಳನ್ನು ನುಡಿಸುತ್ತಾ ಆ ರಸಾನಂದದಲ್ಲಿ ಮಗ್ನರಾಗುವುದು ವೆಂಕಟಪ್ಪನವರ ರೀತಿ. ಹೀಗೆ ಚಿತ್ರ ಹಾಗೂ ಶಿಲ್ಪಕಲೆಯಲ್ಲಿ ಸಾಧಿಸಿದ ಔನ್ನತ್ಯವನ್ನು ಇಲ್ಲಿಯೂ ಅವರು ಸಾಧಿಸಿದ್ದರು. ತಾವು ನುಡಿಸಲಿಕ್ಕೆಂದು ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ತಾವೇ ಒಂದು ವೀಣೆಯನ್ನು ತಯಾರಿಸಿ 'ರಾಜ ವೀಣೆ' ಎಂದು ಕರೆದರು. ಅವರು ಅದನ್ನೇ ವಿಶೇಷವಾಗಿ ಬಳಸುತ್ತಿದ್ದರು. ಇಂದಿಗೂ ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಆ ವೀಣೆಯನ್ನು ಕಾಣಬಹುದಾಗಿದೆ.

ಕಲೆಗಾಗಿಯೇ ಇಡೀ ಬದುಕನ್ನು ಮೀಸಲಿಟ್ಟ ವಿರಳರಲ್ಲಿ ವೆಂಕಟಪ್ಪನವರು ಅದ್ವಿತೀಯರು. ಚಿತ್ರ, ಶಿಲ್ಪ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಅಪಾರ ಪಾಂಡಿತ್ಯವನ್ನು ಗಳಿಸಿ, ಶ್ರೇಷ್ಠ ಕೃತಿಗಳನ್ನು ರಚಿಸಿ ಖ್ಯಾತಿ ಪಡೆದರು. ಆದರೂ ಇಂತಹ ಪ್ರತಿಭಾವಂತ ಕಲಾವಿದರನ್ನು ತಕ್ಕ ಕಾಲದಲ್ಲಿ ಗುರುತಿಸಿ ಗೌರವಿಸುವ ಕಾರ್ಯವನ್ನು ಸಮಾಜವಾಗಲಿ, ಸರ್ಕಾರವಾಗಲಿ ಮಾಡಲಿಲ್ಲ. ೧೯೬೦ ವೇಳೆಗೆ ಅವರಿಗೆ ಸಂಧಿವಾತವೆಂಬ ಬೇನೆ ಕಾಣಿಸಿಕೊಂಡು ತುಂಬಾ ತೊಂದರೆ

ಅನುಭವಿಸಿದರು. ಆದರೂ ಅವರ ಕಲಾಭ್ಯಾಸ ನಿರಂತರವಾಗಿ ಸಾಗಿತು. ಗೌರವ, ಸನ್ಮಾನಗಳು ಸಿಗಲಿಲ್ಲವೆಂದು ಕೊರಗುವ ಜೀವ ಅವರದಲ್ಲ. ಕಲೆ ಅವರ ಜೀವನದ ಉಸಿರಾಗಿತ್ತು. ಅವರು ಅನಾರೋಗ್ಯದಿಂದ ನರಳುತ್ತಾ ಹಾಸಿಗೆ ಹಿಡಿದಿದ್ದಾಗ ಕೆಲವು ಕಲಾವಿದರು ಸನ್ಮಾನಕ್ಕೆ ಒಪ್ಪಿಕೊಳ್ಳಬೇಕೆಂದು ಕೇಳಿದಾಗ "ನಾನಿನ್ನೂ ಕಲಾ ವಿದ್ಯಾರ್ಥಿ, ಸನ್ಮಾನ ಅನಗತ್ಯ" ಎಂದು ತಿರಸ್ಕರಿಸಿದರು.

ಆದರೆ ಅವರ ಕೊನೆಯ ದಿನಗಳಲ್ಲಿ, ಅಂದರೆ ೧೯೬೨ರಲ್ಲಿ ಕೇಂದ್ರ ಲಲಿತ ಕಲಾ ಅಕಾಡೆಮಿಯವರು ಅವರ ಪ್ರತಿಭೆಯನ್ನು ಗುರುತಿಸಿ ಅವರ ಮನೆಬಾಗಿಲಿಗೆ ಬಂದು ಅವರನ್ನು ಸನ್ಮಾನಿಸಿದರು. ಈ ಸನ್ಮಾನದ ಸಂದರ್ಭವನ್ನು ಕುರಿತು ಹಿರಿಯ ಸಾಹಿತಿ ವಿ.ಸೀ., ಅವರು "ಜೀವಕ್ಕೆ ಪುರಸ್ಕಾರ ಬರುವುದೆಂದರೆ ನಿಷ್ಠೆಗೂ, ಪರಮ ಯೋಗ್ಯತೆಗೂ ಲೋಕ ಸಮರ್ಪಿಸುವ ಕಾಣಿಕೆ. ಅವರ ಬದುಕಿಗೂ, ಕೃತಿಗಳಿಗೂ ನಾಡು ಸಲ್ಲಿಸುವ ಧನ್ಯವಾದ. ಅವರ ಜೀವನವೇ ಒಂದು ತಪಸ್ಸು" ಎಂದು ಹೃದಯ ತುಂಬಿ ಬರೆದಿದ್ದಾರೆ.

'ಸೂರ್ಯಾಸ್ತ'ವೆಂಬ ಪ್ರಕೃತಿ ದೃಶ್ಯವೇ ಅವರ ಕೊನೆಯ ಕೃತಿಯೆಂದು ಹೇಳಲಾಗುತ್ತದೆ. ಥಾಳಾದ ರಕ್ತವರ್ಣದಿಂದ ರಂಜಿತವಾದ ಆಕಾಶ, ಗಿರಿಧಾಮಗಳ ಮೇಲೆ ತೋರುವ ಕೆಂಬಣ್ಣದ ಅಲೆಲೆಯಾದ ರೇಖೆಗಳು, ಇದೆಲ್ಲವನ್ನು ಕಬಳಿಸುವಂತೆ ತೋರಿಬರುವ ಕಪ್ಪು ಹಾಗೂ ಹಸುರು ಬಣ್ಣದ ಭೂ ಪ್ರದೇಶ, ಆಕಾಶ ಹಾಗೂ ಭೂಮಿ ಇವೆರಡರ ನಡುವೆ ಇನ್ನೇನು ಮುಳುಗಲಿರುವ ಕುಂಕುಮದ ಬೊಟ್ಟಿನಂತೆ ತೋರಿಬರುವ ಸೂರ್ಯನಿಂದ ಕೂಡಿದ ಅಪೂರ್ವ ಕೃತಿ. ಇದನ್ನು ಕುರಿತು "His last work is symbolic and almost a premonition of his own sunset." ಎಂಬ ವಿ.ಸೀ.

ಯವರ ಮಾತು ತುಂಬಾ ಅರ್ಥಪೂರ್ಣವಾಗಿದೆ. ಹೀಗೆ ಕಲಾತಪಸ್ವಿ, ಕಲಾಯೋಗಿ ಎಂದು ಪ್ರಖ್ಯಾತರಾದ ಕೆ. ವೆಂಕಟಪ್ಪನವರು ೧೯೬೫ರಲ್ಲಿ ಇಹಲೋಕವನ್ನು ತ್ಯಜಿಸಿದರು. ಕಲಾ ತಪಸ್ವಿಯ ಆತ್ಮ ಅಮರವಾಯಿತು.


ಬಳಿಕ ಕರ್ನಾಟಕ ಸರ್ಕಾರದವರು ವೆಂಕಟಪ್ಪನವರ ನೆನಪಿಗಾಗಿ ಬೆಂಗಳೂರಿನ ವಸ್ತು ಸಂಗ್ರಹಾಲಯದ ಪಕ್ಕದಲ್ಲೇ 'ವೆಂಕಟಪ್ಪ ಆರ್ಟ್‌ಗ್ಯಾಲರಿ' ಯೆಂಬ ಸುಂದರ ಸ್ಮಾರಕವೊಂದನ್ನು ನಿರ್ಮಿಸಿದರು. ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ನಿರ್ಮಿಸಲಾಗಿರುವ ಭವ್ಯವಾದ ಸ್ಮಾರಕ ಕೆ. ವೆಂಕಟಪ್ಪ ಕಲಾಭವನ. ಅಲ್ಲಿ ವೆಂಕಟಪ್ಪನವರ ಹಲವು ಕೃತಿಗಳನ್ನು, ಅವರು ಬಳಸುತ್ತಿದದ ವೀಣೆಗಳನ್ನು, ಉಪಯೋಗಿಸುತ್ತಿದ್ದ ಕುಂಚ, ಬಣ್ಣ ಮೊದಲಾದ ಅಪೂರ್ವ ವಸ್ತುಗಳನ್ನು ಪ್ರದರ್ಶಿಸಿದ್ದಾರೆ. ಈ ವಸ್ತು ಸಂಗ್ರಹಾಲಯ ಕನ್ನಡ ನಾಡಿನ ಕಲೆಗೆ ಹಾಗೂ ವೆಂಕಟಪ್ಪನವರ ಕಲಾ ಕೀರ್ತಿಗೆ ಯೋಗ್ಯ ಸ್ಮಾರಕ. ಈ ಒಂದು ಕಾರ್ಯದಿಂದ ಬದುಕಿದ್ದಾಗ ಈ ಕಲಾ ತಪಸ್ವಿಯ ಮನಸ್ಸಿಗೆ ಸಂತೋಷವಾಗುವಂತೆ ನಡೆದು ಕೊಳ್ಳಲಾಗದಿದ್ದರೂ, ಅವರು ತೀರಿಕೊಂಡ ಬಳಿಕವಾದರೂ ಅವರ ಆತ್ಮಕ್ಕೆ ಸಂತೋಷವಾಗುವಂಥ ಒಂದು ಕೆಲಸ ಮಾಡಲಾಗಿದೆ ಎಂದು ಕನ್ನಡನಾಡಿನ ರಸಿಕವೃಂದ, ಜನತೆ ಹಾಗೂ ಸರಕಾರ ಹೆಮ್ಮೆಪಟ್ಟುಕೊಳ್ಳಬಹುದಾಗಿದೆ.



ಊಟಿಯ ಎಲ್ಕೆ ಗುಡ್ಡಕ್ಕೆ ದಾರಿ



ಜಿಂಕೆಯೊಡನೆ ರಾಧೆ
RADHA AND THE DEER



ಕೊಡೈಕೆನಾಲ್‌ನ ಒಂದು ದೃಶ್ಯ
A SETTING IN KODAIKANAL



ದಮಯಂತಿ
DAMAYANTI



ಶಕುಂತಲೆಯ ನಿರ್ಗಮನ
PARTING OF SHAKUNTALA



ರಾವಣ ಮತ್ತು ಜಟಾಯು
RAVANA AND JATAYU






ಹಳೆಯ ಅಗ್ರಹಾರದಲ್ಲಿನ ಒಂದು ಮರ
TREE IN AN EXTENSION IN MYSORE




ಕೊಕರನ ಪಥ (ಕೊಡೈಕೆನಾಲ್)



ವೀಣೆಯ ಹುಚ್ಚು




ರವೀಂದ್ರನಾಥ ಠಾಕೂರ್
RAVINDRANATH TAGORE



ವೀಣೆ ಶೇಷಣ್ಣ
VEENA SESHANNA



ಮಹಾ ಪರಿತ್ಯಾಗ
GREAT RENUNCIATION



ಶಿವ ತಾಂಡವ
SHIVA THANDAVA



ಗಣಪತಿಗೆ ನೈವೇದ್ಯ
OFFERING TO GANAPATI



ಟೀಪೂ ಸುಲ್ತಾನ್ (ರೇಖಾಚಿತ್ರ)
TIPU SULTAN (A LINE DRAWING)



ಪಕ್ಷಿ
BIRD



ಪುಷ್ಪಾಕೃತಿ
FLOWER STUDY



ಬೆಳದಿಂಗಳು
FULL MOON



"My Knowledge of fine arts is a drop in the ocean." That is how artist K. Venkatappa, who is fondly referred to as a "Kala Yogi" described his attainments as an artist. As one contemplates on these words, one is reminded of the familiar saying "Vidya daati Vinayam" (learning endows one with humility).

There is another instance which evokes a sense of great respect about the renowned artist. Years ago, a Bangalore bookseller found it very difficult to find a buyer for an expensive imported book entitled "Persian Paintings". A friend suggested that the one person who would be interested in such a work was K. Venkatappa of Mysore. Accordingly, the bookseller who was not

aware of the artist's address, wrote to him as K.Venkatappa. Artist, Palace buildings, Mysore. By return of post, the former received a reply asking that the book be sent per VPP. In a post script, the bookseller was asked to note: "I am not an artist. I am only an art student, Please note the disignation while writing my address".

The two above instances reveal Venkatappa's self-effacing nature. It was well-known that right through his life, he described himself as a connosisseur and never as a "Kala tapasvi". He was an embodiment of courtesy and humility that were worthy of a man who had reached dizzy heights in art. For numerous contemporary artists who are persistently after publicity, he has remained an ideal.

There is no doubt that this internationally - known, national artist is a proud offering of Karnataka to Indian art.

This rare individual who soared as a bright star in the firmament of Karnataka art, was born in 1887 in a Chitragar family of Mysore. He was a many-sided genius, creating masterpieces in more than one sphere. Whether painting or sculpture,

relief in plaster of Paris or etching on copper plates, miniature on ivory or playing the veena, his mastery was unmistakable. One with a mastery over anyone of these varied media, could have paraded himself as a noted artist. But Venkatappa shunned publicity and chose to remain low, isolating himself to give his full time to the service of fine arts. He never yielded to cheap publicity or flattery. On the contrary, he was a fully dedicated artist, a "Karma Yogi" par excellence.

It can be easily said that art was in the very veins of Venkatappa. He was born in a family of artists. Venkatappa, a reputed artist of Chitradurga, was his grandfather. His father Krishnappa was a palace artist. His ancesters had migrated from Andhra to Mysore during the reign of the Wodiyars.

Venkatappa had spent his childhood and youth in Mysore. He had his initial training in art under K. Ramakrishna at the Chamaraja Technical Institute. In the construction of the new palace, artists and artisans from all over the country were involved. As a boy, Venkatappa also had an opportunity to work in the operations. The youngster who was displaying the craftsmanship

worthy of an adept, produced a work entitled "Simha-Simhini". That piece attracted the attention of Maharaja Krishnaraja Wodiyar IV. When he was told that the work was by Venkatappa, the Maharaja couldn't believe that such a fine piece could be by a young boy. A small test, however, put the doubt at rest. He appreciated the youngster's skill and as a token of it gifted Rs 100 to him on the spot.

With such royal patronage, it is nothing surprising that opportunities should have come Venkatappa's way to prosecute studies in fine arts at Madras, the Government School of Arts there being the only one of its kind in the south at the time. Eventually, the Maharaja was doubly pleased to know that Venkatappa had passed in all the exams there in first class. On return Venkatappa met the Maharaja and expressed his gratitude to him for the help extended to him to learn art. Pleased with the youngster's humility, the latter asked what he proposed to do next. Hesitatingly, Venkatappa expressed his desire to pursue his studies under the renowned Abanindranath Tagore in Calcutta. The budding artist's zest for learning pleased the prince who immediately arranged for teaching English to him.

ROYAL PATRONATE

Venkatappa had received good grounding in the western style of art at the Madras School. With the encouragement of the Maharaja, Venkatappa in 1908 proceeded to Calcutta for higher studies in art on a Government scholarship.

In the famous art college at Calcutta, Venkatappa came under the tutelege of Percy Brown, the well-known art teacher from England, and Abanindranath Tagore who was at the vanguard of Indian renaissance. Though originally slated for two years, his art education continued for seven years, Venkatappa extending his interest beyond the intended painting to cover all facets of fine arts from drawing to sculpting and even to music. At the same time, he visited the different galleries of art in that part of the country. His sincerity and earnestness won the appreciation of his mentors and before returning home he had become the favourite of Abanindranath Tagore.

From an incident that took place while Venkatappa was in Calcutta, one can visualise the height which he had reached in fine arts. In 1911 a Mrs. Herringham of London had come to India

with a view to get copies of the world-famous Ajanta frescoes made. She asked Percy Brown and Abanindranath Tagore to depute some artists to undertake the task of copying. The latter deputed their foremost disciples Nandalal Bose and Venkatappa for the purpose. Venkatappa's reproductions won the admiration of those concerned for their faithful details, colour harmony and artistic sensibilities of the original. From this achievement Venkatappa came to be recognised at the national level. Just as he returned to Mysore after all these laurels, Brown also recommended that he be sent to the Royal College of Arts, London for advanced studies. The Maharaja who had appreciated Venkatappa's dedication to art also agreed to do so. But he was deprived of such an apportunity due to the outbreak of the Second World War which prevented foreign tours. Thus he settled down in Mysore, pursuing his creative activity under royal patronage.

As desired by the Maharaja, Venkatappa who had turned 20 by then started working on some sculpture. Involved in his work all the time, he never felt like getting married. Rather, he was of the firm opinion that marriage would be a

hindrance to artistic pursuits and decided to remain single, dedicating his life to art.

Krishnaraja Wodiyar was on intimate terms with Venkatappa. Having recognised the artistic potential in the artist, the Maharaja provided an appointment for him in the palace itself. Besides, he had relaxed all protocol restrictions regarding dress, etc., for him while meeting the royal personage.

Venkatappa was known for orderliness and discipline in life. In every activity of his one could discern orderliness. Whether in a simple matter like a dress or the way he set about creating a work of art, this discipline, this systematised approach was apparent. He was stern in his manners, not yielding to any one's obligation. Wedded to truthfulness, he was fearless and undaunted in his attitude. He was not the one to be bogged down either by authority or pressure. The Maharaja also had arranged things in such a way that Venkatappa's feelings were not hurt, nor his individuality questioned while carrying on with his work.

In accordance with His Higness's wish, Venkatappa started on the sculptures in the palace

itself. This encouragement extended to the artist is symbolic of the ruler's respect for art. Works like the miniatures on ivory of His Higness and the artist's Guru Abanindranath Tagore he painted at the time, are masterpieces. That was the time when he produced many of his famous reliefs on plaster of Paris, some of which adorn the palace walls even today.

While Venkatappa was engaged in such artistic pursuits in the palace or in his own studio, he came in contact with the renowned veena maestro Seshanna. His artistry had made a deep impression on the former. The personality of Seshanna who was gentle, simple and refined appealed to him so much that Venkatappa at once decided to learn veena from him. Once he started leaning music, he absorbed himself so completely in the practice of the veena that his painting was totally neglected. His well-wishers who had been observing this, wrote to Abanindranath Tagore in the matter. It perturbed the latter no end who in turn wrote to Venkatappa on the following lines: "You have good prospects in the field of fine arts. Do not neglect its pursuit". It is in response to that Venkatappa painted the now familiar work

"Illusion of Veena",where the artist symbolically depicts how his over- indulgence in veena had resulted in the total neglect of his art.

Abanindranath Tagore who was very much impressed by the significant work was convinced that his disciple had after all not lost touch with painting. The incident also made Venkatappa who had set aside his palette for some time to resume his creative pursuit.

Venkatappa was of an independent diposition, not willing to be bound by any rules or regulations. His talent as an artist was recognised all over the country. When one of his teachers Percy Brown retired from the Government College of Fine Arts, Calcutta, he himself had suggested that the most suitable candidate to fill the vacancy would be Venkatappa.

Accordingly, the Bengal Government offered the post to Venkatappa. But the latter who had determined to lead an independent life, politely declined it. In his reply, he explained, "I am not an artist. I would like to remain as a student of art all my life. My ambition is to delve deep into the very depths of this ocean known as art. Such positions

and offices would come in the way of realising my goal. Nor do such offices go well with my temperament".

At another time, there was a call to him for decorating the Viceregal Palace in Delhi. There again, he declined the offer, explaining that he was more interested in dedicating his service to the State of Mysore. Thus it can be seen that he was not enamoured of any lucrative position, dedicating his whole life to the service of art like a mendicant.

TO BANGALORE

Venkatappa was not the one to tolerate any injustice or disrespect to art or artists. After the demise of Krishnaraja Wodiyar the Fourth, who was an inveterate patron of fine arts, the manner in which royalty and the palace officials bahaved, was revolting to his refined taste. He was so much irritated by the change that had taken place in the palace that he did not even hesitate to sue them in the court. He was so upset by the developments that he packed up his art materials and works and left Mysore for good to settle down in Bangalore.

Once, "Udbodhan," a prestigious Bengali journal started by Swami Vevekananda, had published his painting "Anguli Pradhana" (Lord Rama handing over his signet ring to Anjaneya). Inadvertantly, the painting was printed obversely. With the result, it appeared as though Rama was handing it over with his left hand. Likewise, Hanuman seemed receiving the ring with his left hand. On seeing the picture, Venkatappa flew into a rage. He termed it as blashphemy.

He couldn't understand how an experienced editor could not have noticed it. He promptly brought it to the notice of the editor and suggested that he publish an apology in a subsequent issue. In the absence of any response from the editor, Venkatappa was beside himself. He filed a suit in the Calcutta High Court, pleading that the injustice and disrespect shown to the artist be compensated. Later, as per the direction of the court, the publisher paid a token fine or Re. one to Venkatappa. From these instances one can visualise how Venkatappa would not hesitate to revolt at any injustice meted out to fine art or artists from any quarters.

After the demise of Krishnaraja Wodiyar, the self-respecting Venkatappa got disgusted at the attitude of palace officials. It hurt him so much that he decided to quit Mysore, a city he had come to admire and the palace with which he had developed a close relationship. In 1946 when he was sixty years of age, Venkatappa moved over to Bangalore. He got a house to suit his taste in the quiet, sylvan surroundings of Malleswaram and settled down to continue his artistic pursuits.

Here again, the veteran obliged art lovers to view his works after arranging a methodic display in the premises. At the same time, he often bemoaned at the "utter lack of respect among our people to art and artists". In these words one could discern the hard truth of his own experience. People seemed to ignore him though they were not unaware of his reputation. The State had failed to avail of his services to art. Yet today his works are rated very high and have become invaluable assets of the country!

From the foundation he had in Madras and Calcutta, Venkatappa had inherited an art technique based on traditional lines. In due course, he developed an individual style of his own.

His interest in the colour fantasy of nature and its play of light and shade was abiding. Few could match his mastery over the water-colour medium. It is a challenging technique as once the colour is applied, it does not facilitate further changes as in the case of oil colours. Venkatappa has marvelled in his painting on subjects relating to nature. In each one of these masterly works one can see the purity of the hues. He has depicted settings in Ooty and the Himalayan range in different seasons. On viewing one of his works on Ooty, renowned Kannada poet Kuvumpu was so much overwhelmed that he burst out into a verse entitled "Varna Shilpi" (colour sculptor).

In his works one can see the colour variations that characterise each season. Besides in each one of them he has displayed his mastery over linear grandeur. Avoiding the use of white was also one of his specialities. The lake reflecting the effects of light, evening or a moonlit night, a rain-doused thick forest, snow-clad mountain range, the sun-rise and sun-sets are all captured in arresting hues.

In addition to such impressive landscapes,Venkatappa has painted portraits and

poetic sequences galore on ivory surfaces. Controlling water-colour on the slippery ivory surface is a challenging task. It is a specialised technique, not mastered by many. Even in this medium Venkatappa has created masterpieces. The portraits of Abanindranath Tagore, Krishnaraja Wodiyar-IV and the Maharaja of Cooch-Behar in this unique genre are classic examples of his panache. They stand out for their distinct colour harmony, individual character and artistic insight. The brush work in these works is so delicate that their linear beauty can be appreciated only through a magnifying glass. The shades he has used to enliven the eyes are equally impressive. They all speak for the artist's mastery over the medium as also his experience. Some of these works are not available for public viewing. But there is no doubt that they are examples of the master's aesthetic sensibilities.

Another medium in which Venkatappa has displayed inimitable mastery is the plaster of Paris. It is a form sans colours. Yet the impress of colours has to be produced in the work. What determines the artist's ability is the dents and bulges. Their sharpness determines the standard reached by the sculptor.

Three such works are significant. The first is that of his music teacher, the renowned Veena Seshanna. The high esteem in which Venkatappa held his Guru is almost palpable in this great piece. The dignified facial expression, his eloquent eyes, neatly draped turban, flushy eye-brows, luxurious moustache, the chubby face, the laced upper cloth that adorned the coat, are all characteristic, evoking the feeling of the very presence of that august personality.

Similar is the bust of Gurudev Tagore which adorns the foyer of the Ravindra Kalakshetra in Bangalore. The bust was sculpted after the poet's visit to Mysore in 1922, with the help of half a dozen portrait studies of Gurudev. A flowing grey bear enhancing the composed facial expression, the slightly opened lips under the flushy moustache which seem almost ready to utter a word or two and the long, acquiline nose speak for the perceptive eye of the artist.

Though Venkatappa generally selected celebrities for his subjects, "Mani" testifies to the fact that he did not shy away from the common folk. This again is a rare work where the innocence of the youngster comes out so naturally. The ears,

the tuft in the scalp which appears like a wick of an oil lamp and the sharp, inquisitive eyes should arrest any viewer.

SOME EXQUISITE WORKS

The panels Venkatappa worked on at the instance of Krishnaraja Wodiyar IV for adorning the Ambavils Hall in the palace may be described as masterpieces of art. In "Siddhartha's Departure", "The Buddha and Disciple", "Anguli Pradana," "Drona teaching archery to Pandavas", "Ekalavya", "Shiva Thandava", "Farewell to Shakuntala" one can discern how the artist has deeply studied each episode before arriving at the eloquent composition. He has paid particular attention to the personalities portrayed in the compositions.

The "Departure of Siddhartha" depicts a placid face, determined on renunciation. Equally significant is the display of sincerity of purpose and devotion to the Guru while Ekalavya is practicing archery. The setting where Drona is teaching archery to the Pandavas is incomparable. Shiva Thandava stands out for its dignified stance. The proportioned features of the limbs as Shiva is engrossed in his cosmic dance is assertive of the

artist's sure hand. Farewell to Shakuntala is another rare work of art. In her face one can discern on the one side the happiness coupled with anxiety at the prospect of meeting her husband after long separation, and on the other the inevitable pangs of going away from her near and dear ones as also the familiar surrounding with which she had grown so fond of. Thus it is a face which depicts mixed emotions. Meanwhile, a deer Shakuntala had brought up is tucking at the edge of her sari to attract her attention. The deer seems apprehensive of the impending departure of its mistress. Indeed, it is a touching sight. Thus Venkatappa's classic pieces have immortalised his name.

If a reference to his deep interest and love for music is not made, his biography would remain incomplete. Fine arts, he had achieved a mastery over its sister arts as well. In a manner of spealing, if the fine arts of painting had been his means of livelihood, music was the one from which he derived aesthetic satisfaction.

Even while in Calcutta, Venkatappa had come to know Srirangam Ramaswamy Iyengar, a disciple of the renowned Veena Seshanna of

Mysore. This association had instilled in him a keen desire to learn music under the veena maestro. Accordingly, on return to Mysore he started learning the devine instrument from the master. He had devoted the best part of over seven years for the purpose. Seshanna, on his part, was so much impressed by the seriousness of the disciple that he imparted to him all the intricacies of music. Having won the admiration of the Guru, Venkatappa was able to achieve a high degree of efficiency in the art.

But as in the case of fine arts, he was not willing to teach music to anyone. Nor was he inclined to appear on public platforms. He would play only to derive personal comfort. Usually, he would play in the still of the night when the entire community would be fast asleep and the din of the city was quietened. It was not given to all and sundry to listen to his music. A select few like D.V.G. and Veesee to name only a few, had enjoyed that privilege. He would normally take up a raga and elaborate it in such way as to explore all the possibilities of its mood and range. Yet he would never overdo a single movement. Often he would dwell on a single raga for the whole duration of the night.

As in the case of fine arts,Venkatappa had perfected music as well. He normally played on the instrument which he had himself developed as per prescribed standards. He had named it as "Raja Veena". This particular veena is on display in the Venkatappa Gallery in Bangalore even today.

Venkatappa was one of the few who had dedicated his entire life to fine arts. He had not only created masterpieces in painting and sculpture, but had made a mark as a musician of class. Yet neither the Government nor society had recognised his merits in time. By 1960 he suffered much due to arthritis. That, however, did not stop him from continuing his creative activities. Nor was he the one who would crib for awards or honours. Fine art was his life breath and it filled both his physical and spiritual being. When a few artist friends and admirers pressed him to accept an award when he was bed-ridden, he declined it saying "I am only a student of art. Awards are unnecessary for me".

However, during his last days, that is in 1962, the Central Lalitkala Academi, having at last recognised his contribution to art, honoured him at his door step. About this unique function, the

well-known litterateur V. Sitaramiah has this to say: An honour like this is a token of appreciation of a person's integrity and contribution. It is a sign of gratitude of a nation to the artist's purposeful life and the great works he has created. His very life is a 'Tapas'.

"Sunset" is said to be the last work of Venkatappa. It is indeed a great work and VC himself rightly describes it as "His last work is symbolic and almost a premonition of his own sunset".

Thus, Venkatappa who has been aclaimed as a 'Kala Yogi' died in 1963 and became immortal. Later, to commemorate his services to fine arts, the State Government erected the Venkatappa Art Gallery in the sylvan surroundings of the Cubbon Park. It juxtaposes the State Museum. In that imposing three-storey building, many of the venerable artist's works, his veena, the brushes and colours he was using as also such other materials are preserved for posterity.

It is indeed a worthy memorial to a great artist.